13 January 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

ಭಾವನಾಂತರಂಗ

ನಾವು ಮಾಡಿದ ಸಣ್ಣ ತಪ್ಪುಗಳು,ಮುಂದಿನ ದಿನಗಳಲ್ಲಿ ದೊಡ್ಡ ತಪ್ಪು ಮಾಡದಂತಿರಲು ಅರಿವು ಕೊಡುತ್ತದೆ!!
-ಸ್ನೇಹಾ ಆನಂದ್

ಒಂದೊಳ್ಳೆ ಮಾತು

ಯಾರು ನಮ್ಮವರು"? ಎಂಬ ಪ್ರಶ್ನೆಗೆ, ಸಮಯ ಸಂದರ್ಭ- ಪರಿಸ್ಥಿತಿಗಳೇ ನಮಗೆ ಉತ್ತರ ನೀಡುತ್ತದೆ
ಮೈಲಾರ ಸಾವಿತ್ರಿಬಾಯಿ

info.varthaman@gmail.com
9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 75 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಕಲ್ಲಿದ್ದಲು ಯುಗ ಅಂತ್ಯ ಹಸಿರು ಜಲಜನಕ-ಸೋಲಾರ್ ಕ್ರಾಂತಿ

ವಿಶೇಷ ವರದಿ:
ಎಚ್ ಆರ್ ಶ್ರೀಶಾ
ಬೆಂಗಳೂರು

ಪ್ರಸ್ತುತ ಜಗತ್ತು ಪರಿಸರ ಮಾಲಿನ್ಯದ ಸವಾಲನ್ನು ಎದುರಿಸುತ್ತಿದ್ದು, ಕಲ್ಲಿದ್ದಲಿನ ಬಳಕೆ ಇಳಿಮುಖವಾಗುತ್ತಿದೆ. ಇದರ ಬದಲಾಗಿ ಸೌರಶಕ್ತಿ (Solar) ಮತ್ತು ಹಸಿರು ಜಲಜನಕ (Green Hydrogen) ಆಧಾರಿತ ಇಂಧನ ಪದ್ಧತಿ ಹೊಸ ಭರವಸೆಯಾಗಿ ಮೂಡಿಬಂದಿದೆ.

ವಿಶೇಷವಾಗಿ ಉಕ್ಕು ತಯಾರಿಕಾ ಕಾರ್ಖಾನೆಗಳಲ್ಲಿ ಕಲ್ಲಿದ್ದಲಿನ ಬಳಕೆ ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣವಾಗಿದ್ದು, ಇದನ್ನು ಶೂನ್ಯಗೊಳಿಸಲು ಹಸಿರು ಜಲಜನಕದ ಬಳಕೆ ಅನಿವಾರ್ಯವಾಗಿದೆ.

ಸರ್ಕಾರದ ಕ್ರಮಗಳು ಮತ್ತು ಭವಿಷ್ಯದ ಗುರಿ

ಭಾರತ ಸರ್ಕಾರವು ಹಸಿರು ಜಲಜನಕಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, 'ರಾಷ್ಟ್ರೀಯ ಹಸಿರು ಜಲಜನಕ ಆಯೋಗ'ವನ್ನು ರಚಿಸಿ 20 ಸಾವಿರ ಕೋಟಿ ರೂ. ಬಂಡವಾಳ ಹೂಡಿದೆ.

2030ರ ವೇಳೆಗೆ ಇದು ಪ್ರಮುಖ ಪರ್ಯಾಯ ಇಂಧನವಾಗಲಿದ್ದು, 2050ರ ಹೊತ್ತಿಗೆ ಶೇ. 80ರಷ್ಟು ಬಳಕೆ ತಲುಪುವ ಗುರಿ ಇದೆ. ಕಾಂಡ್ಲಾ, ತೂತ್ತುಕುಡಿ ಮತ್ತು ಪರದೀಪ್‌ಗಳಲ್ಲಿ ಹಸಿರು ಜಲಜನಕ ಕೇಂದ್ರಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಈ ಬದಲಾವಣೆಯಿಂದ ಸುಮಾರು 8 ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ ಮತ್ತು 1 ಲಕ್ಷ ಕೋಟಿ ರೂ. ವಿದೇಶಿ ವಿನಿಮಯ ಉಳಿತಾಯವಾಗಲಿದೆ.

ಆರ್ಥಿಕ ಮತ್ತು ಪರಿಸರ ಲಾಭಗಳು

ಹಸಿರು ಜಲಜನಕದ ಬಳಕೆಯಿಂದ ಕೇವಲ ಪರಿಸರ ರಕ್ಷಣೆ ಮಾತ್ರವಲ್ಲದೆ, ಆರ್ಥಿಕವಾಗಿಯೂ ದೇಶಕ್ಕೆ ಅನುಕೂಲವಾಗಲಿದೆ. ಕಲ್ಲಿದ್ದಲು ಆಮದು ಕಡಿಮೆಯಾಗುವುದರಿಂದ ವಿದೇಶಿ ವಿನಿಮಯದ ಹೊರೆ ತಗ್ಗುತ್ತದೆ. ಜಿಂದಾಲ್ ಮತ್ತು ಜೆಎಸ್‌ಡಬ್ಲ್ಯೂ ಅಂತಹ ದೊಡ್ಡ ಕಂಪನಿಗಳು ಈಗಾಗಲೇ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ.

ಹಸಿರು ಜಲಜನಕದ ಉತ್ಪಾದನೆ ಮತ್ತು ಸವಾಲುಗಳು

ಸೌರ ವಿದ್ಯುತ್ ಬಳಸಿ ನೀರನ್ನು ವಿಭಜಿಸುವ ಮೂಲಕ ಹಸಿರು ಜಲಜನಕವನ್ನು ಪಡೆಯಲಾಗುತ್ತದೆ. ಇದು ಬಣ್ಣ ಮತ್ತು ವಾಸನೆ ರಹಿತವಾಗಿದ್ದು, ಗಾಳಿಗಿಂತ ಹಗುರವಾಗಿದೆ. ಆದರೆ, ಇದು ಸ್ಫೋಟಕ ಗುಣ ಹೊಂದಿದ್ದು, ಇದನ್ನು ಸಾಗಿಸುವುದು ಅತ್ಯಂತ ಕಠಿಣ ಮತ್ತು ಪುಟ 2ಕ್ಕೆ

ಉಕ್ಕು ಉದ್ಯಮ ಮತ್ತು ಇಂಗಾಲದ ಹೊರಸೂಸುವಿಕೆ

ಭಾರತದಲ್ಲಿ ಸುಮಾರು 900 ಉಕ್ಕಿನ ಕಾರ್ಖಾನೆಗಳಿದ್ದು, ವಾರ್ಷಿಕ 200 ಮಿಲಿಯನ್ ಟನ್ ಕಚ್ಚಾ ಕಬ್ಬಿಣ ತಯಾರಿಸಲಾಗುತ್ತಿದೆ. ಪ್ರಸ್ತುತ ಉಕ್ಕು ತಯಾರಿಕೆಯಲ್ಲಿ ಕಲ್ಲಿದ್ದಲನ್ನು ಬಳಸುವುದರಿಂದ ಜಾಗತಿಕ ಇಂಗಾಲಾಮ್ಲ ಹೊರಸೂಸುವಿಕೆಯಲ್ಲಿ ಶೇ. 11ರಷ್ಟು ಪಾಲು ಈ ಉದ್ಯಮದ್ದಾಗಿದೆ. ಪ್ರತಿ ಒಂದು ಟನ್ ಉಕ್ಕು ತಯಾರಿಕೆಗೆ 2 ಟನ್ ಇಂಗಾಲಾಮ್ಲ ಬಿಡುಗಡೆಯಾಗುತ್ತದೆ. ಇದನ್ನು ತಡೆಯಲು ಹಸಿರು ಜಲಜನಕ ಅತ್ಯುತ್ತಮ ಪರ್ಯಾಯ. ಒಂದು ಕೆಜಿ ಹಸಿರು ಜಲಜನಕದ ಬಳಕೆಯಿಂದ ಸುಮಾರು 25 ಕೆಜಿ ಇಂಗಾಲಾಮ್ಲ ಪರಿಸರಕ್ಕೆ ಸೇರುವುದನ್ನು ತಪ್ಪಿಸಬಹುದು.

ಕರ್ನಾಟಕದ ಮಂಗಳೂರಿನಲ್ಲೂ ಇಂತಹ ಕೇಂದ್ರ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ. ಸಾರಿಗೆ ಕ್ಷೇತ್ರದಲ್ಲಿ (ಕಾರು, ಬಸ್, ಟ್ರಕ್) ಇದರ ಬಳಕೆ ಪುಟ 2ಕ್ಕೆ

ಇಂದು ಮೈಸೂರಿಗೆ ರಾಹುಲ್ ಗಾಂಧಿ

ಮೈಸೂರು: ಕೇರಳದ ವೈಯನಾಡಿಗೆ ಪ್ರವಾಸ ಕೈಗೊಂಡಿರುವ ರಾಷ್ಟ್ರೀಯ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮೈಸೂರಿಗೆ ಬಂದು ಅನಂತರ ಕೇರಳಗೆ ತೆರಳಲಿದ್ದು, ಈ ಮಧ್ಯೆ ಸಿಎಂ, ಡಿಸಿಎಂ ಅವರನ್ನು ಬರಮಾಡಿಕೊಳ್ಳಲಿದ್ದಾರೆ.

ನಾಳೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಿಎಂಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸಭೆ ನಡೆಸುವ ಕಾರ್ಯಕ್ರಮ ನಿಗಧಿಯಾಗಿದೆ. ಬೆಂಗಳೂರಿನ ಎಚ್‌ಎಎಲ್ ವಿಮಾನನಿಲ್ದಾಣದಿಂದ ಸಿಎಂ, ಡಿಸಿಎಂ ಹೊರಟು 1.20ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬರಲಿದ್ದಾರೆ. ಇದೇ ವೇಳೆಗೆ ದೆಹಲಿ ವಿಶೇಷ ವಿಮಾನದ ಮೂಲಕ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬರಲಿದ್ದು, ಅವರನ್ನು ಸಿಎಂ, ಡಿಸಿಎಂ ಬರಮಾಡಿಕೊಳ್ಳುವರು. ಈ ನಡುವೆ 10ರಿಂದ 20 ನಿಮಿಷಗಳ ಗೌಪ್ಯ ಚರ್ಚೆ ನಡೆಸುವರು ಎಂಬ ಮಾಹಿತಿ ಇದೆಯಾದರೂ ಖಚಿತವಾಗಿಲ್ಲ. ರಾಹುಲ್ ಗಾಂಧಿ ಸಮಯ ಕೊಟ್ಟರೆ ರಾಜಕೀಯ ಮಾತುಕತೆ ಆಡಲಿದ್ದಾರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ನಾಳೆ ರಾಹುಲ್ ಗಾಂಧಿ ಮೈಸೂರು ಭೇಟಿ ತೀವ್ರ ಕುತೂಹಲ ಮೂಡಿಸಿದೆ.

ಸಿಎಂ, ಡಿಸಿಎಂ ಜೊತೆ ಚರ್ಚೆಯ ಅಗತ್ಯವಿದ್ದರೆ ದೆಹಲಿಗೆ ಬುಲಾವ್

ಸದ್ಯಕ್ಕಿಲ್ಲ ಸಿಎಂ ಹುದ್ದೆ ಚರ್ಚೆ । ಮಲ್ಲಿಕಾರ್ಜುನ ಖರ್ಗೆ ಪರೋಕ್ಷ ಮಾಹಿತಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಗತ್ಯ ಬಿದ್ದಾಗ ದೆಹಲಿಗೆ ಚರ್ಚೆಗೆ ಕರೆಯಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ನಗರದಲ್ಲಿ ಸುದ್ದಿಗಾರರರ ಜೊತೆಗೆ ಅವರು ಸೋಮವಾರ ಮುಖ್ಯಮಂತ್ರಿ ಹುದ್ದೆ ವಿವಾದದ ಹಿನ್ನೆಲೆಯಲ್ಲಿ ಮಾತನಾಡಿದರು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯನ್ನು ಮಾತುಕತೆಗಾಗಿ ದೆಹಲಿಗೆ ಯಾವಾಗ ಕರೆಸಲಾಗುತ್ತದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಖರ್ಗೆ, ಅಗತ್ಯವಿದ್ದಾಗಲೆಲ್ಲ ಪಕ್ಷವು ಅವರನ್ನು ಕರೆಯುತ್ತದೆ ಎಂದು ಹೇಳಿದರು. ಈ ಮೂಲಕ ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಬದಲಾವಣೆ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇಲ್ಲ ಎಂಬುದನ್ನು ಖರ್ಗೆ ಪರೋಕ್ಷವಾಗಿ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ನವೆಂಬರ್ 20ರಂದು ಐದು ವರ್ಷಗಳ ಅವಧಿಯ ಅರ್ಧವನ್ನು ಪೂರ್ಣಗೊಳಿಸಿದ ನಂತರ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಡಿ.ಕೆ.ಶಿವಕುಮಾರ್ ಬಣದಿಂದ ಒತ್ತಡ

ಬರುತ್ತಿರುವ ಹಿನ್ನೆಲೆಯಲ್ಲಿ ಆಡಳಿತ ಪಕ್ಷದೊಳಗಿನ ಜಗಳ ತೀವ್ರಗೊಂಡಿದೆ. 2023ರಲ್ಲಿ ಸರ್ಕಾರ ರಚನೆಯಾದ ಸಮಯದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ನಡೆದಿದೆ ಎನ್ನಲಾದ ಅಧಿಕಾರ ಹಂಚಿಕೆ ಒಪ್ಪಂದದಿಂದಾಗಿ ಈ ವಿಚಾರ ಮುನ್ನೆಲೆಗೆ ಬಂದಿದೆ.

ಐದು ವರ್ಷಗಳು ತಾವೇ ಮುಖ್ಯಮಂತ್ರಿಯಾಗಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಮಾತನಾಡಿ, ತಮ್ಮ ಕಠಿಣ ಪರಿಶ್ರಮವೇ ರಾಜಕೀಯದಲ್ಲಿ ತಮ್ಮನ್ನು ಇಲ್ಲಿಯವರೆಗೆ ಕರೆತಂದಿದೆ. ಕಾಂಗ್ರೆಸ್ ಪಕ್ಷದ ಭವಿಷ್ಯದ ನಿರ್ಧಾರದ ಬಗ್ಗೆ ತಮಗೆ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ಸಂಕ್ರಾಂತಿ ಬಳಿಕ ಡಿಕೆಶಿ ದೆಹಲಿ ಯಾತ್ರೆ

ಬೆಂಗಳೂರು: ರಾಜ್ಯದಲ್ಲಿ ಸಂಕ್ರಾಂತಿ ಬಳಿಕ ಮತ್ತೆ ಪವರ್ ಶೇರ್ ಸದ್ದು ಶುರು ಆಗಲಿದೆ. ನಾಯಕತ್ವ ಬದಲಾವಣೆ ಗೊಂದಲ ವಿಚಾರವಾಗಿ ಡಿ.ಕೆ.ಶಿವಕುಮಾರ್ ಒತ್ತಡ ತಂತ್ರ



ಪ್ರಯೋಗಿಸಲು ಮುಂದಾಗಿದ್ದಾರೆ ಎನ್ನಲಾಗಿದೆ. ಸಂಕ್ರಾತಿ ಮರು ದಿನ ಜ.16ರಂದು ದೆಹಲಿ ಯಾತ್ರೆಗೆ ಸಜ್ಜಾಗಿರುವ ಡಿಕೆಶಿ ಅವರು, ರಾಹುಲ್ ಗಾಂಧಿ ಮುಂದೆ ಒಪ್ಪಂದದಂತೆ ಮುಖ್ಯಮಂತ್ರಿ ಹುದ್ದಿ ನೀಡುವಂತೆ ಮನವಿ ಮಾಡಲು ತಂತ್ರ ರೂಪಿಸಿದ್ದಾರೆ. ರಾಹುಲ್ ಗಾಂದಿ ಭೇಟಿಗೆ ಸಮಯ ಕೇಳಿದ್ದಾರೆ ಎಂದು ತಿಳಿದುಬಂದಿದೆ. ಜ.16 ಹಾಗೂ 22ರಂದು ದೆಹಲಿಗೆ

ನರೇಗಾ ಮರು ಜಾರಿವರೆಗೂ ಹೋರಾಟ

ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆ: ಸಚಿವ ಮಹದೇವಪ್ಪ ವಾಗ್ದಾಳಿ

ಮೈಸೂರು: ಮಹಾತ್ಮ ಗಾಂಧಿ ಉದ್ಯೋಗ ಖಾತರಿ (ನರೇಗಾ) ಯೋಜನೆ ಹೆಸರು ಬದಲಿಸಿ ತಿದ್ದುಪಡಿ ಮಾಡಿರುವ ಕೇಂದ್ರದ ರಾಮ್ ಜೀ ರಾಮ್ ಕಾಯ್ದೆ ವಾಪಾಸ್ ಪಡೆಯುವವರೆಗೂ ಕಾಂಗ್ರೆಸ್ ನಿರಂತರವಾಗಿ ಹೋರಾಟ ನಡೆಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ನಗರಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನರೇಗಾ ತಿದ್ದುಪಡಿಯು ರಾಜಕೀಯ, ಆರ್ಥಿಕ ಮತ್ತು ಸಂವಿಧಾನದ ಹಕ್ಕನ್ನ ಉಲ್ಲಂಘನೆ ಮಾಡುತ್ತದೆ. ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸದೆ ತರಾತುರಿಯಲ್ಲಿ ಕಾಯ್ದೆ ಮಂಡಿಸಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ. ಈ ಕಾಯಿದೆ ದುಡಿಯುವ ಹಕ್ಕಿಗೆ ಮಾರಕವಾಗಿದೆ ಎಂದು ಕಿಡಿಕಾರಿದರು.

ರಾಮ್ ಜೀ ರಾಮ್ ಕಾಯ್ದೆ ಜನರಿಗೆ ಮರಣ ಶಾಸನವಾಗಿದೆ.

ಬಿಜೆಪಿ ಪಾದಯಾತ್ರೆ ಹಾಸ್ಯಾಸ್ಪದ

ಮೈಸೂರು: ಬಿಜೆಪಿ ಆಡಳಿತದಲ್ಲಿ ಬಳ್ಳಾರಿ ಹೇಗೆ ರಿಪಬ್ಲಿಕ್ ಆಗಿತ್ತು. ಸಂಪತ್ತು ಯಾರ ಕೈಯಲ್ಲಿ ಇತ್ತು ಎಂಬುದು ಗೊತ್ತಿದೆ. ಆರೋಪಿಗಳೇ ಪಾದಯಾತ್ರೆ ಮಾಡುತ್ತೇವೆ ಎನ್ನುವುದು ಹಾಸ್ಯಾಸ್ಪದ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಲೇವಡಿ ಮಾಡಿದರು.

ಬಳ್ಳಾರಿ ಘಟನೆ ಖಂಡಿಸಿ ಬಿಜೆಪಿಯು ಪಾದಯಾತ್ರೆಗೆ ಸಿದ್ಧತೆ ನಡೆಸಿರುವ ಕುರಿತು ಮಾತನಾಡಿದ ಅವರು, ರಾಜಕೀಯ ಉದ್ದೇಶಕ್ಕೆ ನಡೆಯುವ ಯಾತ್ರೆಯಿಂದ ಪ್ರಯೋಜನವಿಲ್ಲ. ಉದ್ಯೋಗ ಖಾತ್ರಿ ಯೋಜನೆಗೆ ತಿದ್ದುಪಡಿ ವಿಚಾರದಲ್ಲಿ ಯಾರು ಬಂದರೂ

ರಂಗ ಸಂಕ್ರಮಣದ ಬಹುರೂಪ ಅನಾವರಣ

ಮೈಸೂರು: ಸುಗ್ಗಿ ಸಂಕ್ರಮಣದ ಸಮೀಪದಲ್ಲಿರುವ ಸಾಂಸ್ಕೃತಿಕ ನಗರದ ಜನರಿಗೆ ರಂಗ ರಸದೌತಣ ಉಣ ಬಡಿಸಲು ನಾಟಕೋತ್ಸವ, ಜಾನಪದ ಮತ್ತು ಪುಸ್ತಕ ಪ್ರದರ್ಶನಗಳ ಸಮಾಗಮದೊಂದಿಗೆ ಸುಗ್ಗಿ ರಂಗ ಸಂಭ್ರಮದ ಬಹುರೂಪಕ್ಕೆ ಚಾಲನೆ ದೊರೆಯಿತು.

ರಂಗಾಯಣದ ವನರಂಗದಲ್ಲಿ ಸೋಮವಾರ ಸಂಜೆ ನೆರೆದಿದ್ದ ನೂರಾರು ರಂಗಾಸಕ್ತರ ಸಮ್ಮುಖದಲ್ಲಿ ಭಾರತೀಯ ರಂಗಭೂಮಿಯ ಹಿರಿಯ ಕಲಾವಿದೆ ಹೈಸ್ನಾಂ ಸಾವಿತ್ರಿ ದೇವಿ ನಾಟಕೋತ್ಸವಕ್ಕೆ ಚಾಲನೆ ನೀಡಿದರು. ಅದರೊಂದಿಗೆ ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಪರಿಕಲ್ಪನೆ ಅಡಿಯಲ್ಲಿ ನಾಟಕಗಳು, ಚಲನಚಿತ್ರೋತ್ಸವ, ಪುಸ್ತಕ ಮೇಳ, ಕರಕುಶಕಲ ಮೇಳ ಮತ್ತು ಪ್ರಾತ್ಯಕ್ಷಿಕೆ, ದೇಸಿ ಆಹಾರ ಮೇಳ, ಚಿತ್ರಕಲಾ ಪ್ರದರ್ಶನ ಸಹಿತ ನಾನಾ ಚಟುವಟಿಕೆಗಳೂ ಪ್ರಾರಂಭವಾದವು. ಮದುವಣಗಿತ್ತಿಯಂತೆ ಸಿಂಗಾರಗೊಂಡಿರುವ ರಂಗಾಯಣದಲ್ಲಿ ಹಬ್ಬದ

ವಾತಾವರಣ ಮೇಳೈಸಿತು.

ಹಿರಿಯ ರಂಗಭೂಮಿ ಕಲಾವಿದೆ ಹೈಸ್ನಾಂ ಸಾವಿತ್ರಿ ಮಾತನಾಡಿ, ಮೈಸೂರಿನ ರಂಗಾಯಣವು ರಾಷ್ಟ್ರೀಯ ರಂಗೋತ್ಸವವನ್ನು ಯಶಸ್ವಿಯಾಗಿ ನಡೆಸುದಷ್ಟೇ ಅಲ್ಲದೇ, ದೇಶದ ವಿವಿಧ ಮೂಲೆಗಳ ಕಲಾವಿದರಿಗೆ ಒಂದು ಪ್ರಮುಖ ಸಂಗಮ ಸ್ಥಾನವನ್ನು ಒದಗಿಸಿದೆ ಎಂದರು. ಮೈಸೂರು ರಂಗಾಯಣ ಮತ್ತು ಮಣಿಪುರದ ಕಲಾಕ್ಷೇತ್ರವು ಕೇವಲ ಸ್ನೇಹಿತರಾಗಿ ಪುಟ 2ಕ್ಕೆ

ಹಲವು ಉದ್ಘಾಟನೆ

ಮೈಸೂರು: ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಮತ್ತು ಬೆಳ್ಳಿ ಹಬ್ಬದ ಹಿನ್ನೆಲೆ ರಂಗಾಯಣದ ಆವರಣದಲ್ಲಿ ಏರ್ಪಡಿಸಿರುವ ಪುಸ್ತಕ, ಕರಕುಶಲ ಮೇಳ ಹಾಗೂ ಬಾಬಾ ಸಾಹೇಬ್ ಛಾಯಾಚಿತ್ರ ಪ್ರದರ್ಶನ, ಚಿತ್ರಕಲಾ ಪ್ರದರ್ಶನವನ್ನು ಸಚಿವ ಶಿವರಾಜ ಎಸ್. ತಂಗಡಗಿ ಉದ್ಘಾಟಿಸಿದರು.

ಬಳಿಕ ನಡೆದ ನಾಟಕೋತ್ಸವದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪುಟ 2ಕ್ಕೆ

ಪ್ರದರ್ಶಕ ಕಲೆಗಳು ಬಹುತ್ವದ ಹೆಗ್ಗುರುತು

ಮೈಸೂರು: ಪ್ರದರ್ಶಕ ಕಲೆಗಳು ಬಹುತ್ವ ಭಾರತದ ಹೆಗ್ಗುರುತುಗಳಾಗಿವೆ ಎಂದು ರಂಗಕರ್ಮಿ ಸಿ.ಬಸವಲಿಂಗಯ್ಯ ಅಭಿಪ್ರಾಯ ಪಟ್ಟರು.

ನಗರದ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಕಾರದೊಂದಿಗೆ ಸೋಮವಾರ ನಡೆದ ರಂಗಭೂಮಿ ಮತ್ತು ಪ್ರದರ್ಶಕ ಕಲೆಗಳು ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಪುಟ 2ಕ್ಕೆ

ಜೂ.30ರೊಳಗೆ ಜಿಬಿಎ ಚುನಾವಣೆ ಮುಗಿಸಿ: ಸುಪ್ರೀಂ ಕೋರ್ಟ್ ಆದೇಶ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ಮುಹೂರ್ತ ಫಿಕ್ಸ್ ಮಾಡಿದೆ. ಜೂನ್ 30ರೊಳಗೆ ಜಿಬಿಎ ವ್ಯಾಪ್ತಿಯಲ್ಲಿರುವ 5 ಪಾಲಿಕೆಗಳಿಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಜಿಬಿಎಗೆ ಚುನಾವಣೆ ನಡೆಸುವ ಸಂಬಂಧ ಸೋಮವಾರ ಸುಪ್ರೀಂ ಕೋರ್ಟ್ನಲ್ಲಿ ಅರ್ಜಿ ವಿಚಾರಣೆ ನಡೆಯಿತು. ಸರ್ಕಾರದ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಎಜಿ ಶಶಿಕಿರಣ್ ಶೆಟ್ಟಿ ವಾದಿಸಿದರು. ಕಡೆಯ ಹಂತದ ಮೀಸಲಾತಿ ಪ್ರಕ್ರಿಯೆಗಳು ನಡೆಯುತ್ತಿವೆ. ಮೀಸಲಾತಿ ಪ್ರಕ್ರಿಯೆ ಫೆಬ್ರವರಿ 28ರ ವರೆಗೂ ನಡೆಯಲಿದೆ. ಮೀಸಲಾತಿ ಪ್ರಕ್ರಿಯೆ ಬಳಿಕ ಚುನಾವಣೆ ನಡೆಸುವುದು ಆಯೋಗಕ್ಕೆ ಬಿಟ್ಟ ವಿಚಾರ ಎಂದು ಸರ್ಕಾರದ ವಕೀಲ ಅಭಿಷೇಕ್ ಮನುಸಿಂಘ್ವಿ ತಿಳಿಸಿದರು. ಪುಟ 2ಕ್ಕೆ

ಜ.15ರಿಂದ 20ರವರೆಗೆ ಐತಿಹಾಸಿಕ ಸುತ್ತೂರು ಜಾತ್ರೆ

15 ಎಕರೆಯಲ್ಲಿ ಕೃಷಿಮೇಳ । 6 ದಿನಗಳ ಕಾಲ ಹಗಲಿರುಳು ಅನ್ನ, ಜ್ಞಾನ ದಾಸೋಹಕ್ಕೆ ಸಿದ್ಧತೆ

ಮೈಸೂರು: ಐತಿಹಾಸಿಕ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಸುತ್ತೂರು ಜಾತ್ರೆಗೆ ಸಕಲ ಸಿದ್ಧತೆ ಮಾಡಲಾಗಿದೆ. ಜನವರಿ 15ರಿಂದ 20ರ ವರೆಗೆ 6 ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವಕ್ಕೆ ಸುತ್ತೂರು ಸಿಂಗಾರಗೊಂಡಿದೆ.

ಸುತ್ತೂರು ಜಾತ್ರೆಗೆ ಆಗಮಿಸುವ ಲಕ್ಷಾಂತರ ಭಕ್ತರಿಗೆ ಸೌಲಭ್ಯ ಕಲ್ಪಿಸಲು ಜೆಎಸ್‌ಎಸ್ ಸಂಸ್ಥೆಯ ಸಾವಿರಾರು ಮಂದಿ ನೌಕರರು ಮತ್ತು ಭಕ್ತರು ಅವಿರತ ಶ್ರಮಿಸುತ್ತಿದ್ದಾರೆ. ಈ ಬಾರಿ ಜಾತ್ರೆ ವಿಶೇಷವಾಗಿ ಪಾರಂಪರಿಕ ಕೃಷಿ, ನಾಡಕುಸ್ತಿ ಸೇರಿ ಅನೇಕ ವಿಶೇಷಗಳನ್ನು ಒಳಗೊಂಡಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಮಂಜುನಾಥ್ ಅವರು ಸೋಮವಾರ ಸುತ್ತೂರು ಗದ್ದಿಗೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಜಾತ್ರೆಯ ವಿಶೇಷಗಳ ವಿವರ ನೀಡಿದರು. ಜಾತ್ರಾ ಮಹೋತ್ಸವವನ್ನು ಜ.15ರಿಂದ 20ರವರೆಗೆ ಶ್ರೀಕ್ಷೇತ್ರ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು. ಪುಟ 2ಕ್ಕೆ



130 ಜೋಡಿಗಳ ಸಾಮೂಹಿಕ ವಿವಾಹ

ಸುತ್ತೂರು ಜಾತ್ರೆ ಅಂಗವಾಗಿ ಜ.16 ಶುಕ್ರವಾರ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ. ಜಾತಿ- ಮತಗಳ ಭೇದವಿಲ್ಲದೆ ಸರ್ವಧರ್ಮಗಳ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಅಂತರ್ಜಾತಿ ವಿವಾಹ, ವಿಶೇಷ ಚೇತನರು ಹಾಗೂ ಹೊರ ಪುಟ 2ಕ್ಕೆ

55ನೇ ದನಗಳ ಪರಿಶೆ

ಸುತ್ತೂರು ಜಾತ್ರೆ ಎಂದರೆ ಜನರ ಜೊತೆ ದನಗಳ ಪರಿಶೆಯೂ ನಡೆಯಲಿದೆ. ಕಳೆದ 54 ವರ್ಷಗಳಿಂದ ಜಾನುವಾರ ಜಾತ್ರೆ ಏರ್ಪಡಿಸಲಾಗುತ್ತಿದೆ. ರೈತರು ತಮ್ಮ ಎತ್ತು, ಹಸು, ಪುಟ 2ಕ್ಕೆ

ತೆಪ್ಪೋತ್ಸವದಲ್ಲಿ ಕಪಿಲಾರತಿ

ಈ ವರ್ಷದ ಜಾತ್ರೆಗಾಗಿ ವಿಶೇಷವಾದ ನೂತನ ತೆಪ್ಪವನ್ನು ಸಿದ್ಧಪಡಿಸಲಾಗಿದೆ. ತೆಪ್ಪದ ಸುತ್ತಲೂ 16 ನಂದಿಗಳನ್ನು ಸ್ಥಾಪಿಸಲಾಗಿದೆ. ಆಕರ್ಷಕ ವಿನ್ಯಾಸದ 8 ಕಂಬಗಳು ಹಾಗೂ ಚಿತ್ರಗಳನ್ನು ಒಳಗೊಂಡ ಭವ್ಯವಾದ ಮಂಟಪವಿದೆ. ಮೋಟಾರ್ ಚಾಲಿತ ಈ ತೆಪ್ಪಕ್ಕೆ ವಿಶೇಷವಾದ ಪುಟ 2ಕ್ಕೆ

ಸಾವಿರ ಕ್ವಿಂಟಲ್ ಅಕ್ಕಿ ಬಳಕೆ

ಸುತ್ತೂರು ಜಾತ್ರೆಯಲ್ಲಿ ಭಾಗವಹಿಸುವ ಲಕ್ಷಾಂತರ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. 6 ದಿನಗಳ ಕಾಲ ಹಗಲು-ರಾತ್ರಿ ನಿರಂತರ ಪ್ರಸಾದ ವ್ಯವಸ್ಥೆ ಇರಲಿದೆ. ಸಮಸ್ತ ಭಕ್ತಾದಿಗಳಿಗೆ ಪ್ರತಿನಿತ್ಯವೂ ಬೆಳಗ್ಗೆ ಮಧ್ಯಾಹ್ನ ಹಾಗೂ ರಾತ್ರಿ ಪ್ರಸಾದದ ವ್ಯವಸ್ಥೆ ಇರುತ್ತದೆ. ಪುಟ 2ಕ್ಕೆ

ಶ್ರೀಗಳ ಸೂಚನೆ ಮೇರೆಗೆ ಈ ಬಾರಿ ಭಕ್ತರಿಗೆ ಹಗಲಿರುಳು ಸಿಹಿ ಹಂಚಿಕೆ ಹಾಗೂ ದಾಸೋಹವನ್ನು ಮಾಡಲಾಗುವುದು. ಜಾತ್ರಾ ಮಹೋತ್ಸವದ ಯಶಸ್ಸಿಗೆ ಬೇಕಾದ ಎಲ್ಲಾ ತಯಾರಿ ಮಾಡಲಾಗಿದೆ.
ಮಂಜುನಾಥ್
ಕಾರ್ಯದರ್ಶಿ, ಜೆಎಸ್ ಎಸ್ ಮಹಾವಿದ್ಯಾಪೀಠ

ಮೊದಲ ಪುಟದಿಂದ

ಜ.15ರಿಂದ ಸುತ್ತೂರು ಜಾತ್ರೆ

ಜರುಗಲಿವೆ ಎಂದು ಹೇಳಿದರು. ಜ.15ರಂದು ಗುರುವಾರ ಗ್ರಾಮೀಣ ಕಲೆ ರಂಗೋಲಿ ಸ್ಪರ್ಧೆ, 15 ಮತ್ತು 16ರಿಂದ ಮೂರು ದಿನ ಸೋಬಾನೆ ಪದ ಸ್ಪರ್ಧೆಯಲ್ಲಿ 150ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ. ವಿಶೇಷವಾಗಿ ಜ. 18ರಂದು ರಾಗಿ ಬೀಸುವ ಸ್ಪರ್ಧೆ ಏರ್ಪಡಿಸಲಾಗಿದೆ.

ಜ.18ರಂದು ಭಾನುವಾರ 1ರಿಂದ 10ನೇ ತರಗತಿಯ ಜೆಎಸ್‌ಎಸ್ ಸಂಸ್ಥೆಗಳ ಹಾಗೂ ಇತರೆ ಶಾಲೆಗಳ ವಿದ್ಯಾರ್ಥಿಗಳಿಗಾಗಿ ನಾಲ್ಕು ವಿಭಾಗಗಳಲ್ಲಿ ಸ್ಥಳದಲ್ಲೇ ಚಿತ್ರ ರಚಿಸುವ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ರಾಜ್ಯ ಹಾಗೂ ಹೊರರಾಜ್ಯ ಕಲಾವಿದರುಗಳ ಕಲಾಕೃತಿಗಳ ಪ್ರದರ್ಶನ, ಮಾರಾಟ ಹಾಗೂ ಸ್ಥಳದಲ್ಲೇ ಸಾರ್ವಜನಿಕರ ಭಾವಚಿತ್ರ ಬಿಡಿಸಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ.

ಕೃಷಿ ಮೇಳ: ಕೃಷಿ ಕ್ಷೇತ್ರದಲ್ಲಿನ ಪ್ರಮುಖ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸಲು ಸಾಂಪ್ರದಾಯಿಕ ಹಾಗೂ ಆಧುನಿಕ ಕೃಷಿ ಪದ್ಧತಿಗಳನ್ನು ಹಮ್ಮಿಕೊಳ್ಳಲಾಗಿದೆ. 2026 ಅಂತಾರಾಷ್ಟ್ರೀಯ ರೈತ ಮಹಿಳಾ ವರ್ಷ ಎಂದು ಘೋಷಣೆ ಮಾಡಿರುವುದರ ಪ್ರಯುಕ್ತ 'ಮುಂದಿನ ಪೀಳಿಗೆಯ ಕೃಷಿಯಲ್ಲಿ ಮಹಿಳೆಯ ಪಾತ್ರ' ಶೀರ್ಷಿಕೆಯಡಿ ಈ ವರ್ಷ ಕೃಷಿಮೇಳವನ್ನು ಆಯೋಜಿಸಲಾಗುತ್ತಿದೆ. ಒಂದು ಎಕರೆ 'ಕೃಷಿ ಬ್ರಹ್ಮಾಂಡ', ನೆರಳು ಮನೆಯಲ್ಲಿ ಬೆಳೆದ ಹಲವಾರು ದೇಸಿ ಹಾಗೂ ವಿದೇಶಿ ತರಕಾರಿ, ಏಕದಳ, ದ್ವಿದಳ ಧಾನ್ಯ, ಎಣ್ಣೆಕಾಳು, ವಾಣಿಜ್ಯ ಬೆಳೆಗಳು, ಮೇವಿನ ಬೆಳೆ ವಿವಿಧ ಫಲಪುಷ್ಪ, ತೋಟಗಾರಿಕೆ ಬೆಳೆಗಳು, ರೇಷ್ಮೆಕೃಷಿ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ಅನುಸರಿಸಿ ಬೆಳೆದಿರುವ ಸುಮಾರು 300 ಬೆಳೆಗಳು ಹಾಗೂ ವಿವಿಧ ತಳಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಕೃಷಿ ಅಭಿವೃದ್ಧಿ ಇಲಾಖೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಖಾಸಗಿ ಉಪಕರಣಗಳ ಮಾರಾಟಗಾರರು ವಸ್ತುಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ದೇಸಿ ತಳಿಗಳ ಹಸು, ಕುರಿ, ಮೇಕೆ, ಕೋಳಿಗಳ ಪ್ರದರ್ಶನಕ್ಕೂ ಅವಕಾಶ ಕಲ್ಪಿಸಲಾಗಿದೆ.

ನಾಡಕುಸ್ತಿ: ಜ.19ರಂದು ರಾಷ್ಟ್ರಮಟ್ಟದ ನಾಡಕುಸ್ತಿ ಪಂದ್ಯ ನಡೆಯಲಿವೆ. ಈ ಬಾರಿ ಎರಡು ಮಾರ್ಪಿಟ್ ಕುಸ್ತಿಗಳಿರುತ್ತವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ 'ಸುತ್ತೂರು ಕೇಸರಿ' ಪ್ರಶಸ್ತಿ ಹಾಗೂ ಸ್ಥಳೀಯ ಕುಸ್ತಿ ಸ್ಪರ್ಧೆ ವಿಜೇತರಿಗೆ 'ಸುತ್ತೂರು ಕುಮಾರ' ಪ್ರಶಸ್ತಿಗಳನ್ನು ನೀಡಲಾಗುವುದು. ಈ ವರ್ಷದಿಂದ ವಿಶೇಷವಾಗಿ 'ಸುತ್ತೂರು ಕಿಶೋರ' ಪ್ರಶಸ್ತಿಯನ್ನು ನಂಜನಗೂಡು ತಾಲ್ಲೂಕಿನವರಿಗೆ ಕೊಡಲಾಗುವುದು

ಮಲ್ಲಕಂಬ ಪ್ರದರ್ಶನ: ಸುತ್ತೂರಿನ ಉಚಿತ ವಸತಿ ಶಾಲೆಯ ಮಲ್ಲಕಂಬ ತಂಡದಿಂದ ನಿತ್ಯವು ಶಾಲಾ ಆವರಣದಲ್ಲಿ ಮಲ್ಲಕಂಬ ಪ್ರದರ್ಶನವಿರುತ್ತದೆ. ಮಲ್ಲಕಂಬದ ಮೇಲೆ ವಿವಿಧ ಯೋಗಾಸದ ಭಂಗಿಗಳ ಪ್ರದರ್ಶನ, ಹೆಣ್ಣು ಮಕ್ಕಳು ಹಗ್ಗದ ಮೇಲೆ ಕಸರತ್ತುಗಳನ್ನು ಪ್ರದರ್ಶನ ಮಾಡಲಿದ್ದಾರೆ. ಮಲ್ಲಕಂಬ ಪಟು ಪಿರಮಿಡ್ ನಿರ್ಮಿಸಿ ನೋಡುಗರನ್ನು ಅಚ್ಚರಿಗೊಳಿಸುತ್ತಾರೆ.

ದೇಸಿ ಆಟಗಳು: ಜ.17ರ ಶನಿವಾರ ಗ್ರಾಮೀಣ ಪುರುಷರಿಗೆ ಮತ್ತು 18ರ ಭಾನುವಾರ ಗ್ರಾಮೀಣ ಮಹಿಳೆಯರಿಗೆ ಹಾಗೂ ಜೆಎಸ್‌ಎಸ್ ಸಂಸ್ಥೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 17ರ ಶನಿವಾರದಿಂದ 19ರ ಸೋಮವಾರದವರೆಗೆ ಸ್ಪರ್ಧೆಗಳು ನಡೆಯಲಿವೆ.

ರಾಜ್ಯಮಟ್ಟದ ಭಜನಾ ಮೇಳ: 32ನೇ ರಾಜ್ಯಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆ ನಡೆಯಲಿದೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಸುಮಾರು 750ಕ್ಕೂ ಹೆಚ್ಚು ಪುರುಷ, ಮಹಿಳಾ, ಮಕ್ಕಳ ತಂಡಗಳು ಭಾಗವಹಿಸಲಿವೆ. ಒಟ್ಟು ಏಳು ವಿಭಾಗಗಳಲ್ಲಿ ಈ ಸ್ಪರ್ಧೆ ನಡೆಯಲಿದ್ದು, ಪ್ರತಿ ವಿಭಾಗಕ್ಕೂ ಪ್ರತ್ಯೇಕ ಬಹುಮಾನವಿರಲಿದೆ.

55ನೇ ದನಗಳ ಪರಿಷೆ

ಹೋರಿಗಳನ್ನು ಮಾರಾಟ ಮಾಡಲು ಮತ್ತು ಕೊಳ್ಳಲು ಆಗಮಿಸುತ್ತಾರೆ. ಪಶುಪಾಲನಾ ಹಾಗೂ ಪಶುವೈದ್ಯಕೀಯ ಇಲಾಖೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಮಾಡಲಾಗುತ್ತದೆ.

ತೆಪ್ಪೋತ್ಸವದಲ್ಲಿ ಕಪಿಲಾರತಿ

ದೀಪಾಲಂಕಾರವಿದೆ. ಬಾಣಬಿರುಸುಗಳ ಹಿನ್ನೆಲೆಯಲ್ಲಿ ತೆಪ್ಪೋತ್ಸವವು ನೋಡುಗರ ಕಣ್ಮನಸೆಳೆಯಲಿದೆ. ಜ.19ರಂದು ಸೋಮವಾರ ತೆಪ್ಪೋತ್ಸವದಂದು ಕಪಿಲಾರತಿ ಏರ್ಪಡಿಸಲಾಗಿದೆ. ಸಾರ್ವಜನಿಕರ ಮನೋರಂಜನೆಗಾಗಿ ಜಾತ್ರೆಯ ಎಲ್ಲ ದಿನಗಳಲ್ಲಿ ದೋಣಿ ವಿಹಾರ ಏರ್ಪಡಿಸಲಾಗಿದೆ. ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಭರತನಾಟ್ಯ ಸಾಮೂಹಿಕ ನೃತ್ಯ, ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಸಂಗೀತ, ವಚನಾಧಾರಿತ ನೃತ್ಯ, ಸಾಮೂಹಿಕ ಗಾಯನ ಸ್ಪರ್ಧೆ ಮುಂತಾದ ಸುಮಾರು 400ಕ್ಕೂ ಹೆಚ್ಚು ಕಾರ್ಯಕ್ರಮಗಳಿರುತ್ತವೆ.

130 ಜೋಡಿಗಳ ಸಾಮೂಹಿಕ ವಿವಾಹ

ರಾಜ್ಯಗಳ ವಧು–ವರರು ಸಹ ಪಾಲ್ಗೊಳ್ಳಲಿದ್ದಾರೆ. ಈಗಾಗಲೇ 130 ಮಂದಿ ನೋಂದಣಿ ಮಾಡಿದ್ದಾರೆ. ಸುತ್ತೂರು ಮಠದಿಂದ ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರ ಮತ್ತು ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ನೀಡಲಾಗುತ್ತದೆ, ಸುತ್ತೂರು ಮಠದಿಂದ ಆಯೋಜಿಸಿದ್ದ ಸಾಮೂಹಿಕ ವಿವಾಹ ವ್ಯವಸ್ಥೆಯಲ್ಲಿ ಈವರೆಗೆ 3360ಕ್ಕೂ ಹೆಚ್ಚು ಮಂದಿ ಸತಿಪತಿಗಳಾಗಿದ್ದಾರೆ ಎಂದು ಜೆಎಸ್‌ಎಸ್ ಸಂಸ್ಥೆಯ ಕಾರ್ಯದರ್ಶಿ ಶಿವಕುಮಾರಸ್ವಾಮಿ ತಿಳಿಸಿದರು.

ಸಾವಿರ ಕ್ವಿಂಟಲ್ ಅಕ್ಕಿ ಬಳಕೆ

ಪ್ರಸಾದಕ್ಕಾಗಿ 1,000 ಕ್ವಿಂಟಲ್ ಅಕ್ಕಿ, 250 ಕ್ವಿಂಟಲ್ ತೊಗರಿಬೇಳೆ 1,600 ಕ್ಯಾನ್ ರಿಫೈನ್ಸ್ ಅಡುಗೆ ಎಣ್ಣೆ, 12 ಟನ್ ಬೆಲ್ಲ, 3500 ಕೆ.ಜಿ. ಖಾರದಪಾಡಿ, 140 ಕ್ವಿಂಟಲ್ ಕಡ್ಲೆಹಿಟ್ಟು, 200 ಕ್ವಿಂಟಲ್ ಸಕ್ಕರೆ, 600 ಕೆ.ಜಿ ನಂದಿನಿ ತುಪ್ಪ ಬಳಕೆ ಮಾಡಲಾಗುತ್ತದೆ. ಸುಮಾರು 12 ಕಡೆ ಶುದ್ಧ ಕುಡಿಯುವ ನೀರಿನ ವಿತರಣೆ ವ್ಯವಸ್ಥೆ ಮಾಡಲಾಗಿದೆ.

ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವವರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಸಾರಿಗೆ ಸಂಸ್ಥೆಗಳು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ ಶ್ರೀ ಸುತ್ತೂರು ಕ್ಷೇತ್ರಕ್ಕೆ ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡಿವೆ.

ಮುಂದಿನ 10 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಸಮಾನತೆ ಬರಲಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ । ಯಡ್ರಾಮಿ ತಾಲ್ಲೂಕಿನಲ್ಲಿ 906 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ

ಕಲಬುರಗಿ (ಯಡ್ರಾಮಿ): ಜನವರಿ 12: ಹತ್ತು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಅಸಮಾನತೆ ಹೋಗಿ ಸಮಾನತೆ ಬರಲಿದೆ ಎಂಬ ವಿಶ್ವಾಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಕಲಬುರಗಿ ಆಶ್ರಯದಲ್ಲಿ ಕೆಪಿಎಸ್ ಶಾಲಾ ಆವರಣ ಯಡ್ರಾಮಿಯಲ್ಲಿ ಆಯೋಜಿಸಲಾಗಿದ್ದ ಪ್ರಜಾಸೌಧ. ಕೆಪಿಎಸ್ ಶಾಲೆ ಹಾಗೂ ವಿವಿಧ ಇಲಾಖೆಗಳ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸೌಲಭ್ಯಗಳ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ವನ್ನು ಉದ್ಘಾಟನೆ ಮಾಡಿ ನಂತರ ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ನೆರವೇರಿಸಿ ವಿವಿಧ ಇಲಾಖೆಗಳ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಣೆ ಮಾಡಿ ಮಾತನಾಡಿದರು.

ನೂತನವಾಗಿ ಘೋಷಣೆಯಾಗಿರುವ ಯಡ್ರಾಮಿ ತಾಲ್ಲೂಕಿನಲ್ಲಿ, ಜೇವರ್ಗಿ ಮತಕ್ಷೇತ್ರದಲ್ಲಿ 87 ಕಾಮಗಾರಿಗಳ ಕಾಮಗಾರಿಗಳನ್ನು 867.49 ಕೋಟಿ ವೆಚ್ಚದ , 38.29 ಕೋಟಿ ವೆಚ್ಚ ಕಾಮಗಾರಿಗಳಿಗೆ ಉದ್ಘಾಟನೆ ಮಾಡಲಾಗಿದೆ. ಒಟ್ಟಾರೆ 906 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ರಾಜಕಾರಣಕ್ಕಾಗಿ ಸುಳ್ಳನ್ನು ಹೇಳುವ ವಿರೋಧ ಪಕ್ಷಗಳು ವಿರೋಧಪಕ್ಷದವರು ರಾಜಕಾರಣಕ್ಕಾಗಿ ಸುಳ್ಳನ್ನೇ ಹೇಳುತ್ತಿದ್ದಾರೆ. ಗ್ಯಾರಂಟಿ ಯೋಜನೆ ಗಳಿಂದ ಮೂಲಸೌಕರ್ಯ ಎಲ್ಲೆಡೆ ಅಪಪ್ರಚಾರ ಮಾಡುತ್ತಿದ್ದಾರೆ. ಸರ್ಕಾರ ದಿವಾಳಿಯಾಗಿದ್ದರೆ ಜೇವರ್ಗಿ ಮತಕ್ಷೇತ್ರ ಒಂದರಲ್ಲಿ 906 ಕೋಟಿಗಳನ್ನು ವೆಚ್ಚ ಮಾಡಲಾಗುತ್ತಿರಲಿಲ್ಲ ಎಂದರು.

49 ತಾಲ್ಲೂಕುಗಳಲ್ಲಿ ಕೂಡ ಪ್ರಜಾಸೌಧ ಮಂಜೂರು

ರಾಜ್ಯದಲ್ಲಿ 63 ಹೊಸ ತಾಲೂಕುಗಳನ್ನು ಘೋಷಣೆ ಮಾಡಲಾಗಿತ್ತು. 2018 ರಿಂದ 2023 ರವರೆಗೆ ನೂತನ ತಾಲ್ಲೂಕುಗಳಿಗೆ ಬಿಜೆಪಿ ಸೌಲಭ್ಯ ಒದಗಿಸಿದ್ದು ಕೇವಲ 14 ತಾಲ್ಲೂಕುಗಳಲ್ಲಿ ಮಾತ್ರ ಮಾಡಿದರು. 2023 ರಲ್ಲಿ ಅಧಿಕಾರಕ್ಕೆ ಬಂದ ನಂತರ 49 ತಾಲ್ಲೂಕುಗಳಲ್ಲಿ ಕೂಡ ಪ್ರಜಾಸೌಧಗಳನ್ನು ಮಂಜೂರು ನಮ್ಮ ಸರ್ಕಾರ ಮಾಡಿದ್ದು,

ರೈತರ ಪರವಾದ ಸರ್ಕಾರ

ಈ ಬಾರಿ ಮಳೆ ಹೆಚ್ಚಾಗಿ ಬೆಳೆ ಹಾನಿಯಾಗಿರುವುದರಿಂದ ವೈಮಾನಿಕ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಪರಿಹಾರ ಕೊಡಲು ನಿರ್ಧರಿಸಿ ಎಸ್ ಡಿ.ಆರ್.ಎಫ್ ನಿಂದ 1218 ಕೋಟಿ ಜೊತೆಗೆ ಸರ್ಕಾರದ ವತಿಯಿಂದ ಒಟ್ಟು 1031ಕೋಟಿ ಹೆಚ್ಚುವರಿಯಾಗಿ ಒದಗಿಸಲಾಗಿದೆ.ರಾಜ್ಯದಲ್ಲಿ ಒಟ್ಟು 14.21 ಲಕ್ಷ ರೈತರ ಬೆಳೆ ಹಾನಿಯಾಗಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ 721786 ರೈತರ ಬೆಳೆ ಹಾನಿಗೊಳಗಾಗಿದೆ. 1072 ಕೋಟಿ ಬೆಳೆ ಹಾನಿಗೆ ಪರಿಹಾರ ನೀಡಿದೆ. ಕಲಬುರ್ಗಿ ಜಿಲ್ಲೆಯಲ್ಲಿ 323318 ರೈತರ ಬೆಳೆ ಹಾನಿಯಾಗಿದ್ದು 498 ಕೋಟಿ ಪರಿಹಾರ ನೀಡಲಾಗಿದೆ ಎಂದರು. ರೈತರ ಖಾತೆಗಳಿಗೆ ಅನುದಾನವನ್ನು ತಲುಪಿಸುವ ಕೆಲಸ ಮಾಡಿದ್ದೇವೆ. ರೈತರ ಸಹಾಯಕ್ಕೆ ಸರ್ಕಾರ ಸದಾ ಮುಂದಾಗಿದೆ. ನೆಟ್ಟೆ ರೋಗಕ್ಕೆ ತುತ್ತಾದ ತೊಗರಿ ಬೆಳೆಗೆ 233 ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಕಬ್ಬಿನ ಬೆಲೆ ಕಡಿಮೆ ಎಂದು ರೈತರು ಪ್ರತಿಭಟಿಸಿದಾಗ ಅವರ ನೆರವಿಗೆ ಸರ್ಕಾರ ಧಾವಿಸಿ ಸರ್ಕಾರದಿಂದ 50 ಹಾಗೂ ಕಾರ್ಖಾನೆಯಿಂದ 50 ರೂ. ನಿಗದಿ ಮಾಡಿ 300 ಕೋಟಿ ಗಳನ್ನು ಸರ್ಕಾರದಿಂದ ಕಬ್ಬಿನ ಬೆಳೆಗಾರರಿಗೆ ನೀಡಲಾಗಿದೆ ಎಂದರು.

ನಿರ್ಮಾಣ ಮಾಡಲಾಗುವುದು ಎಂದರು.

ಬಿಜೆಪಿ ವತಿಯಿಂದ ಕಲ್ಯಾಣ ಕರ್ನಾಟಕದಲ್ಲಿ 19 ತಾಲ್ಲೂಕುಗಳು ಮಂಜೂರಾಗಿದ್ದರೆ, ಕೇವಲ ಎರಡು ಕಟ್ಟಡ ಮಾತ್ರ ನಿರ್ಮಾಣವಾಗಿದೆ. ನಮ್ಮ ಸರ್ಕಾರ 17 ತಾಲ್ಲೂಕುಗಳು ಮಂಜೂರಾಗಿದ್ದು,97 ನಾಡ ಕಚೇರಿಗಳು ಮಂಜೂರಾಗಿವೆ. ಕಲ್ಯಾಣ ಕರ್ನಾಟಕದಲ್ಲಿ 39 ಕಚೇರಿಗಳನ್ನು ಮಂಜೂರು ಮಾಡಲಾಗಿದೆ. ಎರಡನೇ ಹಂತದಲ್ಲಿ 53 ನಿರ್ಮಾಣವಾಗಿವೆ. ಕಲ್ಯಾಣ ಕರ್ನಾಟಕದ 25 ತಾಲ್ಲೂಕುಗಳಲ್ಲಿ ನಾಡ ಕಚೇರಿಗಳನ್ನು ನಮ್ಮ ಸರ್ಕಾರ ಮಂಜೂರು ಮಾಡಿದೆ ಎಂದರು.

ಬಿಜೆಪಿ ಕೇವಲ ಕೋಮುವಾದ ಮಾಡುವ ಕೆಲಸ ಮಾಡಿದೆ ಎಂದರು. ಕೋಮುವಾದ, ಹಿಂದುತ್ವ ಎಂದು ಜನರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ ಎಂದರು. 371 ಜೆ ಜಾರಿಯಾಗಿದ್ದು ಕಾಂಗ್ರೆಸ್ ಸರ್ಕಾರದಿಂದ ಬಿಜೆಪಿಯ ಗೃಹ ಸಚಿವ ಹಾಗೂ ಉಪಪ್ರಧಾನಿಯಾಗಿದ್ದ ಅಡ್ವಾಣಿ ಯವರು 371 ಜೆ ಜಾರಿ ಮಾಡಲು ಸಾಧ್ಯವಿಲ್ಲ ಎಂದಿದ್ದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಇದನ್ನು ಜಾರಿ ಮಾಡಿದರು. ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಂ ಸಿಂಗ್ ಹೋರಾಟದಿಂದ ಇದು ಸಾಧ್ಯವಾಯಿತು ಎಂದರು. ಇದರಿಂದಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆಯಾಯಿತು. 13000 ಕೋಟಿ ಗಳನ್ನು ಮೂರು ವರ್ಷಗಳಲ್ಲಿ ಒದಗಿಸಲಾಗಿದ್ದು, ಈ ವರ್ಷದಲ್ಲಿ 3000 ಕೋಟಿ ಒದಗಿಸಲಾಗಿದೆ ಎಂದರು.

300 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಡಿಗಲ್ಲು ಹಾಕಲಾಗಿದೆ ಶಾಸಕ ಅಜಯ್ ಸಿಂಗ್ ಅವರು ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಬೇಕು. ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದು ಅಜಯ್ ಸಿಂಗ್ ಅವರಿಗೆ ತಿಳಿಸಲಾಗಿತ್ತು. ಅದರಂತೆ 300 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಡಿಗಲ್ಲು ಹಾಕಲಾಗಿದೆ. ರಾಜ್ಯದಲ್ಲಿ ಒಟ್ಟು 900 ರಾಜ್ಯಕ್ಕೆ ಕೆಪಿಎಸ್ ಮಂಜೂರಾಗಿದೆ. ಎ ಐ ಸಿ ಸಿ ಅಧ್ಯಕ್ಷರು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್, ಸಚಿವರಾದ ಪ್ರಿಯಾಂಕ ಖರ್ಗೆ, ಕೃಷ್ಣಬೈರೇಗೌಡ, ಚನ್ನಬಸಪ್ಪ ದರ್ಶನಾಪುರ, ಶರಣ ಪ್ರಕಾಶ್ ಪಾಟೀಲ್, ಮಧು ಬಂಗಾರಪ್ಪ, ರಹೀಂ ಖಾನ್, ಶಾಸಕರು ಉಪಸ್ಥಿತರಿದ್ದರು.

371 ಜೆ ಜಾರಿಯಲ್ಲಿ ಬಿಜೆಪಿಯ ಪಾತ್ರವಿಲ್ಲ

ಬಿಜೆಪಿ ಕೇವಲ ಸುಳ್ಳು ಆರೋಪಗಳನ್ನು ಮಾತ್ರ ಮಾಡುತ್ತದೆ. 371 ಜೆ ಜಾರಿಯಾಗಿದ್ದರೆ ಅದಕ್ಕೆ ಕಾರಣ ಮಲ್ಲಿಕಾರ್ಜುನ ಖರ್ಗೆ, ಧರ್ಮ ಸಿಂಗ್ ಅವರು ಕಾರಣ. ಇದರಲ್ಲಿ ಬಿಜೆಪಿಯ ಪಾತ್ರವಿಲ್ಲ ಎಂದರು. ಬಿಜೆಪಿ ಬೊಗಳೆದಾಸರು, ಸುಳ್ಳು ಹೇಳುವುದು, ಅಪಪ್ರಚಾರ ಬಿಟ್ಟರೆ ಬೇರೇನೂ ಮಾಡುವುದಿಲ್ಲ ಎಂದರು. ಅಸಮಾನತೆ ಹೋಗಲಾಡಿಸಲು ನಂಜುಂಡಪ್ಪ ಅವರ ವರದಿಯನ್ನು ಆಧರಿಸಿ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆ. ಇದರ ಪರಿಣಾಮಗಳ ಬಗ್ಗೆ ವರದಿ ಸಲ್ಲಿಸಲು ಗೋವಿಂದ ರಾವ್ ಸಮಿತಿ ರಚಿಸಲಾಗಿದೆ. ಶೀಘ್ರದಲ್ಲಿ ವರದಿಯ ಶಿಫಾರಸುಗಳನ್ನು ಜಾರಿ ಮಾಡಲಾಗುವುದು ಎಂದರು.

ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಸರ್ಕಾರ

1 ಲಕ್ಷದ 12 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಅನುದಾನ ವೆಚ್ಚ ಮಾಡಲಾಗಿದೆ.ಚುನಾವಣೆ ಪೂರ್ವದಲ್ಲಿ ನೀಡಿದ್ದ ಆಶ್ವಾಸನೆಯಂತೆ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದೆ ಎನ್ನುವುದನ್ನು ಜನ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸರ್ಕಾರ ನುಡಿದಂತೆ ನಡೆದಿದೆ ಎಂದರು. ಕಳೆದ ಚುನಾವಣೆಯಲ್ಲಿ ನಮ್ಮ ಪಕ್ಷದ ವತಿಯಿಂದ 592 ಭರವಸೆಗಳನ್ನು ನೀಡಲಾಗಿತ್ತು. 243 ಭರವಸೆಗಳನ್ನು ಈಡೇರಿಸಲಾಗಿದೆ. ಉಳಿದ ಅವಧಿಯಲ್ಲಿ ಮಿಕ್ಕ ಭರವಸೆಗಳನ್ನು ಈಡೇರಿಸಲಾಗುವುದು ಎಂದರು. ಕಳೆದ ಬಾರಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ಪ್ರಣಾಳಿಕೆಯಲ್ಲಿ ಸೇರಿರದ 30 ಕಾರ್ಯಕ್ರಮಗಳನ್ನು ಜಾರಿ ಮಾಡಲಾಗಿತ್ತು. ಎರಡೂವರೆ ವರ್ಷದಲ್ಲಿ ಕೊಟ್ಟ ಎಲ್ಲಾ ಭರವಸೆಗಳ ಜೊತೆಗೆ ಗ್ಯಾರಂಟಿ ಯೋಜನೆಗಳನ್ನು ಈಡೇರಿಸಲಾಗಿದೆ ಎಂದರು. ಬಿಜೆಪಿ 2018 ರಿಂದ ಅಧಿಕಾರದಲ್ಲಿದ್ದು, ಅವರು ನೀಡಿದ್ದ 600 ಭರವಸೆಗಳಲ್ಲಿ 10% ಭರವಸೆಗಳನ್ನು ಈಡೇರಿಸಲಾಗಲಿಲ್ಲ ಎಂದು ತಿಳಿಸಿದರು.

ಮೊದಲ ಪುಟದಿಂದ

ಪ್ರದರ್ಶಕ ಕಲೆಗಳು ಬಹುತ್ವದ ಹೆಗ್ಗುರುತು

ದೇಶದಲ್ಲಿ ಹಲವು ಭಾಷೆ, ಪ್ರದರ್ಶಕ ಕಲೆಗಳಿವೆ. ನಮ್ಮ ಸಂಸ್ಕೃತಿಯ ಹಿರಿಮೆಯೇ ಇವುಗಳ ಮಿಶ್ರಣದಲ್ಲಿದೆ. ಆದ್ದರಿಂದ ಕಲೆಗಳಲ್ಲಿ ಬೇಧವಿಲ್ಲ. ರಂಗಭೂಮಿಯಂತೂ ಧರ್ಮಾತೀತ, ಜಾತ್ಯತೀತ ಹಾಗೂ ದೇಶಾತೀತವಾಗಿದೆ. ಭಾರತೀಯ ಪ್ರಜೆಗಳಾದ ನಾವು ಎಂಬ ವಾಕ್ಯವೂ ಸಹ ಇದನ್ನೇ ಧ್ವನಿಸುತ್ತದೆ ಎಂದರು. ಎಲ್ಲ ಸಮಯದಲ್ಲೂ ಬೆಳಕನ್ನೇ ಶ್ರೇಷ್ಠವಾಗಿ ಕಾಣಲು ಸಾಧ್ಯವಿಲ್ಲ. ಬೆಳಕು ಸಮಾಜದಲ್ಲಿನ ಅಸಮಾನತೆ ತೋರುತ್ತದೆ. ಕತ್ತಲು ಎಲ್ಲವನ್ನೂ ಒಗ್ಗೂಡಿಸುತ್ತದೆ ಎಂಬ ಚಿಂತನೆಯೂ ಅಗತ್ಯ. ರಂಗಭೂಮಿ ಅಥವಾ ಕಲಾ ಕ್ಷೇತ್ರವು ಇಂತಹ ಆಲೋಚನೆಗೆ ಪ್ರೇರೇಪಿಸುತ್ತದೆ. ರಂಗಭೂಮಿಯಲ್ಲಿ ಪಾತ್ರಗಳನ್ನು ಅಭಿನಯಿಸಲಾಗುತ್ತದೆ ಹೊರತು ನಟರೇ ಪಾತ್ರಗಳಾಗುವುದಿಲ್ಲ. ಸಮಾಜವನ್ನು ಒಗ್ಗೂಡಿಸಲು ಪಾತ್ರಗಳು ಪ್ರಯತ್ನಿಸುತ್ತವೆ. ಕಲೆಯ ಪ್ರಯತ್ನವೂ ಅದೇ ಆಗಿದೆ ಎಂದರು. ಮಧ್ಯಪ್ರದೇಶದ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ಎಸ್. ಧನರಾಜು ಮಾತನಾಡಿ, ಕಲೆ, ಸಾಹಿತ್ಯ ನಮ್ಮನ್ನು ಒಗ್ಗೂಡಿಸುತ್ತದೆ. ಆಧುನಿಕತೆ ಸೃಷ್ಟಿಸುವ ಸಮಸ್ಯೆಗೂ ಇದು ಔಷಧಿ. ದೇಶದ ವೈವಿಧ್ಯತೆ ಉಳಿಸುವುದು, ಇತರರ ವೈವಿಧ್ಯತೆಯನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಬೇಕು ಎಂದು ಹೇಳಿದರು. ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆ ವಹಿಸಿದ್ದರು. ಅಮೆರಿಕದ ಬೇಲರ್ ವಿಶ್ವವಿದ್ಯಾಲಯದ ವಸ್ತ್ರ ವಿನ್ಯಾಸಕಾರ್ತಿ ಪ್ರೊ.ಸಾರಾ ಮೋಷರ್, ವೇದಿಕೆ ಅಧ್ಯಕ್ಷ ರಾಜೇಶ್ ಎಚ್.ತಲಕಾಡು, ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್ ಮತ್ತಿತರರು ಹಾಜರಿದ್ದರು.

ನರೇಗಾ ಮರು ಜಾರಿವರೆಗೂ ಹೋರಾಟ

ಕೇಂದ್ರ ಬಿಜೆಪಿ ಜಾರಿಗೆ ತರುತ್ತಿರುವುದು ಕರಾಳ ಶಾಸನ. ಬಡವರು, ಕಾರ್ಮಿಕರ ವಿರೋಧಿಯಾಗಿದೆ. 2005ರಲ್ಲಿ ಅಂದಿನ ಯುಪಿಎ ಸರ್ಕಾರ ಜಾರಿ ಮಾಡಿದ ಮನರೇಗಾ ಯೋಜನೆ ಬಡ ಜನರಿಗೆ ಉದ್ಯೋಗ ಖಾತರಿ ನೀಡಿತ್ತು. ಮಹಾತ್ಮ ಗಾಂಧೀಜಿಯವರ ಅಂತ್ಯೋದಯ ಮತ್ತು ಸ್ವರಾಜ್ ಆಶಯವನ್ನು ಒಳಗೊಂಡಿತ್ತು ಎಂದರು.

ಮಹಾತ್ಮ ಗಾಂಧೀಜಿ ಹೆಸರನ್ನು ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರ ರಾಷ್ಟ್ರಕ್ಕೆ ಮಾಡಿದ ದೊಡ್ಡ ಅಪಮಾನ. ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಅವಮಾನವಾಗಿದೆ. ಕೇಂದ್ರದ ಎನ್‌ಡಿಎ ಸರ್ಕಾರ ಅನೇಕ ಹೆಸರು ಬದಲಾವಣೆ ಮಾಡಿದೆ. ಆದರೆ, ದೇಶದ ಅಭಿವೃದ್ಧಿ, ಜನರ ಸ್ಥಿತಿ ಹಾಗೆಯೇ ಇದೆ ಎಂದು ಟೀಕಿಸಿದರು. ಕೋವಿಡ್‌ನಂತಹ ಸಂಕಷ್ಟದ ಕಾಲದಲ್ಲಿ ದೀಪ ಹಚ್ಚಿ, ಜಾಗಟೆ ಬಡಿಯುವಂತೆ ಕರೆಕೊಟ್ಟರು. ಆದರೆ ಮನರೇಗಾ 19 ಕೋಟಿ ಜನರಿಗೆ ನೆರವಾಯಿತು. ದೇಶದಲ್ಲಿ 12ಕೋಟಿ ಜನರು ಮತ್ತು ರಾಜ್ಯದಲ್ಲಿ 70 ಲಕ್ಷ ಜನರು ಮನರೇಗಾಕ್ಕೆ ಅವಲಂಬಿತರಿದ್ದಾರೆ. ನರೇಗಾ ಉದ್ಯೋಗವನ್ನು ಅವಲಂಬಿಸಿರುವ 7 ಸಾವಿರ ನೌಕರರು ಬೀದಿ ಪಾಲಾಗುತ್ತಾರೆ ಎಂದು ಆರೋಪಿಸಿದರು.

ಜೂ.30ರೊಳಗೆ ಜಿಬಿಎ ಚುನಾವಣೆ ಮುಗಿಸಿ:

ಚುನಾವಣಾ ಆಯೋಗದ ಪರ ವಕೀಲರು, ಮಾರ್ಚ್ 16ರ ವೇಳೆಗೆ ಮತದಾರರ ಪರಿಶೀಲನೆ ಅಂತ್ಯವಾಗಲಿದೆ. ಬಳಿಕ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದೆ. ಹೀಗಾಗಿ ಮೇ ಕೊನೆ ವಾರದವರೆಗೂ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಂತಿಮವಾಗಿ ಚುನಾವಣಾ ಪ್ರಕ್ರಿಯೆ ಮುಗಿಸಲು ಎಷ್ಟು ಸಮಯ ಬೇಕು ಎಂದು ಕೋರ್ಟ್ ಪ್ರಶ್ನಿಸಿತು. ಇದಕ್ಕೆ ಜೂನ್‌ವರೆಗೂ ಸಮಯ ಬೇಕಾಗಬಹುದು ಎಂದು ಆಯೋಗ ಉತ್ತರಿಸಿತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಜೂನ್ 30ರೊಳಗೆ ಜಿಬಿಎ ಚುನಾವಣೆ ನಡೆಸಲು ನಿರ್ದೇಶನ ನೀಡಿತು. ಇದರ ಜೊತೆ ರಾಜ್ಯ ಸರ್ಕಾರಕ್ಕೆ ಮತ್ತೆ ಸಮಯ ಕೇಳದಂತೆ ಎಚ್ಚರಿಕೆ ನೀಡಿತು.

ಸವಾಲುಗಳು

ದುಬಾರಿ ಕೆಲಸ. ಇದನ್ನು ದ್ರವರೂಪದಲ್ಲಿ ಇಡಲು ಕ್ರಯೋಜನಿಕ್ ತಂತ್ರಜ್ಞಾನದ ಮೂಲಕ –253 ಡಿಗ್ರಿ ತಾಪಮಾನಕ್ಕೆ ಇಳಿಸಬೇಕು. ಈ ಕಾರಣಕ್ಕಾಗಿ, ಜಲಜನಕ ಉತ್ಪಾದನಾ ಘಟಕಗಳನ್ನು ಕೈಗಾರಿಕಾ ಪ್ರದೇಶಗಳಲ್ಲೇ ಸ್ಥಾಪಿಸುವುದು ಹೆಚ್ಚುಸ ಪ್ರಾಯೋಗಿಕ ಮತ್ತು ಆರ್ಥಿಕವಾಗಿ ಲಾಭದಾಯಕ.

ಸೋಲಾರ್ ಕ್ರಾಂತಿ

ಸದ್ಯಕ್ಕೆ ದುಬಾರಿಯಾದರೂ, ಕೈಗಾರಿಕೆಗಳಲ್ಲಿ ಇದರ ಬಳಕೆ ಅಗ್ಗದ ಮತ್ತು ಶುದ್ಧ ಇಂಧನವಾಗಿ ಪರಿಣಮಿಸಲಿದೆ. ಒಟ್ಟಾರೆಯಾಗಿ, ಮುಂಬರುವ ದಿನಗಳಲ್ಲಿ ಇಂಗಾಲ ಮುಕ್ತ ಇಂಧನಕ್ಕೆ ಹೆಚ್ಚಿನ ಬೇಡಿಕೆ ಇರಲಿದ್ದು, ಸೋಲಾರ್–ಜಲಜನಕ ಉತ್ಪಾದನೆಯು ದೇಶದ ಆರ್ಥಿಕ ಬೆಳವಣಿಗೆಯ ಹೊಸ ಇಂಜಿನ್ ಆಗಲಿದೆ. ಸರ್ಕಾರಗಳು ಮತ್ತು ಉದ್ಯಮಗಳು ಈ ನಿಟ್ಟಿನಲ್ಲಿ ಈಗಲೇ ಹೆಚ್ಚಿನ ಬಂಡವಾಳ ಹೂಡುವುದು ಅಗತ್ಯವಾಗಿದೆ.

ಸಂಕ್ರಾಂತಿ ಬಳಿಕ ದೆಹಲಿ ಯಾತ್ರೆ

ಪ್ರವಾಸ ಫಿಕ್ಸ್ ಮಾಡಿಕೊಂಡಿರುವ ಡಿಕೆಶಿ, ಒಂದು ದಿನ ರಾಹುಲ್ ಭೇಟಿಗೆ ಅವಕಾಶ ಕೇಳಿದ್ದಾರೆ. ಜನವರಿ 16ರಂದು ಅಸ್ಸಾಂ ಚುನಾವಣೆ ಸಂಬಂಧಪಟ್ಟಂತೆ ವೀಕ್ಷಕರ ಸಭೆ ಇದೆ. ವೀಕ್ಷಕರ ಸಭೆ ಬಳಿಕ ರಾಹುಲ್ ಜೊತೆಗೆ ಪ್ರತ್ಯೇಕ ಚರ್ಚೆ ನಡೆಸಲು ಡಿ.ಕೆ.ಶಿವಕುಮಾರ್ ಸಮಯ ಕೇಳಿದ್ದಾರೆ. ಜ.22ರಂದು ಕೂಡ ದೆಹಲಿಗೆ ಭೇಟಿ ನೀಡಲಿರುವ ಡಿ.ಕೆ.ಶಿವಕುಮಾರ್, ಆಗಲೂ ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹಾಕಲು ಪ್ರಯತ್ನಿಸುತ್ತಿದ್ದಾರೆ. ಈ ತಿಂಗಳ ಅಂತ್ಯದ ವೇಳೆಗೆ ನಾಯಕತ್ವ ಗೊಂದಲಕ್ಕೆ ತೆರೆ ಬೀಳುವ ನಿರೀಕ್ಷೆ ಇದೆ. ನಾಯಕತ್ವ ಗೊಂದಲ, ಸಂಪುಟ ಪುನರ್‌ರಚನೆ ವಿಚಾರ ಸೇರಿ ಎಲ್ಲದಕ್ಕೂ ತಿಂಗಳ ಅಂತ್ಯಕ್ಕೆ ತೆರೆ ಬೀಳುವ ಸಾಧ್ಯತೆ ಇದೆ ಎಂದು ತಮ್ಮ ಬೆಂಬಲಿಗರಿಗೆ ಡಿಕೆಶಿ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಪಾದಯಾತ್ರೆ ಹಾಸ್ಯಾಸ್ಪದ

ಚರ್ಚೆಗೆ ಸಿದ್ಧರಿದ್ದೇವೆ. ಇದೊಂದು ಸಂವಿಧಾನ ವಿರೋಧಿ ನಡೆ. ಅದಕ್ಕಾಗಿಯೇ ಕಾಂಗ್ರೆಸ್ ನರೇಗಾ ಬಚಾವೊ ಆಂದೋಲನ ಹಮ್ಮಿಕೊಳ್ಳುತ್ತಿದೆ ಎಂದರು.

ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಜಾರಿಗೆ ಕಿರಣ್ ಮಜುಂದಾರ್ ಸೇರಿದಂತೆ ಹಲವರು ವಿರೋಧಿಸುತ್ತಿರುವ ಪ್ರತಿಕ್ರಿಯಿಸಿ, ರಾಜ್ಯದ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗಬೇಕು. ಇಲ್ಲವಾದರೆ ನಾವು ಏನು ಮಾಡಬೇಕೋ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ರಂಗ ಸಂಕ್ರಮಣದ ಬಹುರೂಪ ಅನಾವರಣ

ಮಾತ್ರವಲ್ಲದೆ ಒಂದು ಕುಟುಂಬವಾಗಿ ಸುದೀರ್ಘ ಪಯಣವನ್ನು ಕಂಡಿವೆ. ಗುರುಗಳಾದ ಬಿ.ವಿ. ಕಾರಂತರು ಮತ್ತು ಹೈಸ್ನಾಂ ಕನ್ಹೈಲಾಲ್ ಅವರು ರಾಶೋಮನ್ ನಾಟಕದ ತಯಾರಿ ವೇಳೆಯಲ್ಲಿ ನನ್ನ ಮಗ ತೋಂಬ ಮತ್ತು ರಂಗಾಯಣದ ಕಲಾವಿದರು ಪಟ್ಟ ಪರಿಶ್ರಮ ಮತ್ತು ಸಂತೋಷದ ಕ್ಷಣಗಳು ಕಣ್ಣೆದುರಿಗೆ ಬರುತ್ತಿದೆ ಎಂದರು.

ಕಾಲ ಕಳೆದಂತೆ ರಂಗಭೂಮಿ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಗಳು ಆಗಿವೆ. ಇದು ಅನಿವಾರ್ಯವೂ ಕೂಡ. ಆದರೆ, ಆ ಇಬ್ಬರು ಗುರುಗಳ ಪರಂಪರೆಯನ್ನು, ಅದರ ಸಾರವನ್ನು ಕಳೆದುಕೊಳ್ಳದೆ ಕಾಲಕ್ಕೆ ತಕ್ಕಂತೆ ಸಾಮರಸ್ಯದಿಂದ ಮುಂದುವರೆಸಿಕೊಂಡು ಹೋಗುವುದು ಇಂದಿನ ಪೀಳಿಗೆಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಮಾತನಾಡಿ, ಒಬ್ಬ ಸಾಮಾನ್ಯ ಮನುಷ್ಯ ದೊಡ್ಡ ವ್ಯಕ್ತಿಯಾಗಿ ಬೆಳೆಯಲು ಸಂವಿಧಾನ ಕಾರಣ. ನಾನು ಇಂದು ನಿಂತು ಭಾಷಣ ಮಾಡಲು ಕಾರಣ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಎಂದರು.

ರಂಗಾಯಣಕ್ಕೆ ಉತ್ತಮ ಇತಿಹಾಸ ಇದೆ. ಇಲ್ಲಿಯಂತೆಯೇ ದಾವಣಗೆರೆ, ಕಾರ್ಕಳ, ಶಿವಮೊಗ್ಗ, ಧಾರವಾಡ ಹಾಗೂ ಕಲಬುರ್ಗಿಯಲ್ಲಿ ಪ್ರಾದೇಶಿಕವಾಗಿ ರಂಗಾಯಣ ಸ್ಥಾಪನೆ ಮಾಡಿ ಉತ್ತೇಜನ ನೀಡಲಾಗುತ್ತಿದೆ. ರಂಗಾಯಣದಲ್ಲಿ ದೊಡ್ಡ ಪ್ರತಿಭೆಗಳು ಬೆಳೆದು ನಾಡಿಗೆ ಕಲೆಯನ್ನು ನೀಡುತ್ತಿವೆ ಎಂದು ಪ್ರಶಂಸೆ ವ್ಯಕ್ತ ಪಡಿಸಿದರು.

ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಇಂದು ಪೊಲಿಟಿಕಲ್ ಎನ್ಕ್ರೋಚ್ಮೆಂಟ್ ವ್ಯಾಪಕವಾಗಿ ನಡೆಯುತ್ತಿದೆ. ಜಾಗತಿಕವಾಗಿ ಈ ಕಾಲವನ್ನು ಎದುರಿಸಲು ನಮಗೆ ಉಳಿದಿರುವುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು. ನಾವು ಇಂದು ಬಾಬಾ ಸಾಹೇಬ್ ಅವರ ಗುರುತುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು. ಇದನ್ನು ನಾವು ರಾಷ್ಟ್ರೀಯ ನಾಟಕೋತ್ಸವದ ರೂಪದಲ್ಲಿ ಮಾಡುತ್ತಿದ್ದೇವೆ. ಇಲ್ಲಿಗೆ ಭಾರತದ ಬೇರೆ ಬೇರೆ ಭಾಗದಿಂದ 24 ನಾಟಕ ತಂಡಗಳು ಬಂದು ಭಾಗವಹಿಸುತ್ತಿವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತಕ್ಕೆ ಮಾತ್ರ ಸೀಮಿತವಲ್ಲ ಎಂದು ತಿಳಿಸಿದರು.

ವಿಶ್ವದ ಯಾವುದೇ ಮೂಲೆಯಲ್ಲಿ ದ್ವೇಷ, ಅಸೂಯೆ, ಕೀಳರಿಮೆಗೆ ಒಳಗಾಗಿ ಶೋಷಣೆಗೆ ಒಳಗಾಗಿರುವ ಕಡೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು ನೆರವಿಗೆ ಬರುತ್ತವೆ. ಬಹುರೂಪಿ ನಾಟಕೋತ್ಸವವನ್ನು ನಾವು ಹಲವು ಆಯಾಮಗಳಲ್ಲಿ ರೂಪಿಸಿದ್ದೇವೆ. ಮಕ್ಕಳಿಗಳಾಗಿ ಮಕ್ಕಳ ನಾಟಕೋತ್ಸವ ರೂಪಿಸಿದ್ದೇವೆ. ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದೇವೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಜೆ. ಮಂಜುನಾಥ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್ ರಂಗ ಸಮಾಜದ ಸದಸ್ಯ ಸುರೇಶ್ ಬಾಬು ಇದ್ದರು.

ಹಲವು ಉದ್ಘಾಟನೆ

ರಂಗಾಸಕ್ತರು ವೀಕ್ಷಿಸಿ ಪುಳಕಿತರಾದರು.

ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ, ರುಚಿಕರ ಆಹಾರ ತಿನಿಸು, ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕಾಗಿ 70 ಮಳಿಗೆಗಳು ತಲೆ ಎತ್ತಿವೆ. ನಾನಾ ಭಾಗಗಳಿಂದ ಕುಶಲಕರ್ಮಿಗಳು ಭಾಗವಹಿಸಿದ್ದಾರೆ. ನಾನಾ ಪ್ರಾಂತ್ಯಗಳ ಆಹಾರವನ್ನು ಪರಿಚಯ ಮಾಡಲಾಗಿದೆ.

ನಾಟಕೋತ್ಸವದಲ್ಲಿ ಮೊದಲ ದಿನ ಭೂಮಿಗೀತದಲ್ಲಿ ಮೈಸೂರು ರಂಗಾಯಣದ ರೆಪ್ಟರಿ ರಂಡದ ಅಂಬೇಡ್ಕರ್ ಕೊಲಾಜ್ (ಕನ್ನಡ), ಕಿರು ರಂಗಮಂದಿರದಲ್ಲಿ ಬೆಂಗಳೂರಿನ ಬುತಾಯ್ ಟ್ರಸ್ಟ್ ತಂಡದ ಬ್ಯಾಗ್ ಡಾನ್ಸಿಂಗ್ (ಇಂಗ್ಲಿಷ್), ಕಲಾಮಂದಿರದಲ್ಲಿ ಬೆಂಗಳೂರಿನ ನೆನಪು ಕಲ್ಚರಲ್ ಮತ್ತು ಎಜುಕೇಷನ್ ಚಾರಿಟಬಲ್ ಟ್ರಸ್ಟ್‌ನ ಮಾಯಾದ್ವೀಪ (ಕನ್ನಡ) ನಾಟಕಗಳು ಪ್ರದರ್ಶನಗೊಂಡವು.

ಭೂಮಿಯ ಆಯಸ್ಸು 454 ವರ್ಷ

ಪೌರಾಣಿಕವಾಗಿ ಗಮನ ಸೆಳೆದ ಬೆಟ್ಟ, ಭೂವಿಜ್ಞಾನಿಗಳ ಗಮನ ಸೆಳೆದಿದೆ

ಬ್ಯಾಕ್ಟೀರಿಯಾಗಳು ಅಸ್ತಿತ್ವಕಂಡಾಗ ನಮ್ಮ ರಾಮದೇವರ ಬೆಟ್ಟವೂ ರಚನೆಯಾಗಿತ್ತು

ಶ್ರೀರಾಮ ದೇವರ ಬೆಟ್ಟದ ವಯಸ್ಸು 254 ಕೋಟಿ ವರ್ಷ!



ಬಿ.ವಿ.ಸೂರ್ಯ ಪ್ರಕಾಶ್

ರಾಮನಗರ: ತ್ರೇತಾಯುಗದಲ್ಲಿ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರು ತಮ್ಮ ವನವಾಸದ ವೇಳೆ ಭೇಟಿ ನೀಡಿದ್ದರು ಎಂದು ಪೌರಾಣಿಕವಾಗಿ ಗಮನ ಸೆಳೆದಿರುವ ಶ್ರೀರಾಮ ದೇವರ ಬೆಟ್ಟ (ಶ್ರೀರಾಮಗಿರಿ ಅಂತಲೂ ಪ್ರಸಿದ್ಧಿ) ಭೂವಿಜ್ಞಾನದ (ಜಿಯಾಲಾಜಿಕಲ್) ಗಮನವನ್ನು ಸೆಳೆದಿದೆ.

ರಾಮೋತ್ಸವ ವರ್ತಮಾನ ವಿಶೇಷ 2026

ರಾಮದೇವರ ಬೆಟ್ಟ ಸುಮಾರು 2.5 ಬಿಲಿಯನ್ ವರ್ಷಗಳ ಹಿಂದೆ (ಅಂದರೆ 254 ಕೋಟಿ ವರ್ಷ ಗಳು– ಪ್ರೋಟೆರೋಜಾಯಿಕ್ ಇಯಾನ್ (ಇಯಾನ್ ಅಂದರೆ ಭೂವೈಜ್ಞಾನಿಕ ಯುಗ)) ರಚನೆಯಾಗಿದೆ ಎಂದು ಭೂವಿಜ್ಞಾನಿಗಳು ಅಂದಾಜಿಸಿದ್ದಾರೆ.

ಸರಳವಾಗಿ ಹೇಳುವುದಾದರೆ ಭೂಗ್ರಹದ ರಚನೆ 454 ಕೋಟಿ ವರ್ಷಗಳ ಹಿಂದೆ ಆಗಿದೆ. ಭೂ ಗ್ರಹ ರಚನೆಯಾದ 200 ಕೋಟಿ ವರ್ಷಗಳ ನಂತರ ಮೂರನೇ ಹಂತದಲ್ಲಿ ಶ್ರೀರಾಮ ದೇವರ ಬೆಟ್ಟದ ರಚನೆಯಾಗಿದೆ. ಭೂ ವಿಜ್ಞಾನಿಗಳು ತಮ್ಮ ಸಂಶೋಧನೆಯಲ್ಲಿ ಶ್ರೀರಾಮ ದೇವರ ಬೆಟ್ಟವನ್ನು ಕ್ಲೋಸ್ ಪೇಟೆ ರಾಕ್ಸ್ ಅಂತ ಉಲ್ಲೇಖಿಸಿದ್ದಾರೆ.

ಆಮ್ಲಜನಕ ಕ್ರೂಢಿಕರಣವಾದ ಕಾಲ!

454 ಕೋಟಿ ವರ್ಷಗಳ ಹಿಂದೆ ಭೂಮಿ ರಚೆನಯಾದಗ ತೀವ್ರ ಶಾಖದಿಂದ ಕೂಡಿತ್ತು. ಇದನ್ನು ಹೆಡಿಯನ್ ಯುಗ ಎಂದು ವಿಜ್ಞಾನಿಗಳು ನಾಮಕರಣ ಮಾಡಿದ್ದಾರೆ. ನಂತರದ 54 ಕೋಟಿ ವರ್ಷಗಳಲ್ಲಿ ಭೂಮಿಯ ಶಾಖ ನಿಧಾನವಾಗಿ ಕಡಿಮೆಯಾಗಿ ಭೂಖಂಡಗಳ ರಚನೆಯಾಗಿದೆ. ಈ ಕಾಲವನ್ನು ವಿಜ್ಞಾನಿಗಳು ಆರ್ಕಿಯನ್ ಯುಗ ಎಂದು ಹೆಸರಿಸಿದ್ದಾರೆ. ಇದಾದ 200 ಕೋಟಿ ವರ್ಷಗಳ ನಂತರ ಭೂಮಿಯ ಮೇಲೆ ಆಮ್ಲಜನಕ ಕ್ರೂಢೀಕರಣವಾಗಲಾರಂಭಿಸಿದೆ. ಇದನ್ನು ವಿಜ್ಞಾನಿಗಳು ಪ್ರೋಟೆರೋಜಾಯಿಕ್ ಯುಗ ಕರೆದಿದ್ದಾರೆ. ಇದೇ ಸಂದರ್ಭದಲ್ಲೇ ಲಾವಾ ರಸ ತಣ್ಣಗಾಗಿ ನಮ್ಮ ಶ್ರೀರಾಮ ದೇವರ ಬೆಟ್ಟವೂ ರಚನೆಯಾಗಿದೆ. ಇದೇ ಯುಗದಲ್ಲಿ ಬ್ಯಾಕ್ಟೀರಿಯಾ, ಆಲ್ಗೆ ಮುಂತಾದವು ಸೂಕ್ಷ್ಮ ಜೀವಿಗಳು ಜನ್ಮತಾಳಲಾರಂಭಿಸಿದೆ. ಆರ್ಕಿಯನ್ ಯುಗದಲ್ಲೇ ಶ್ರೀರಾಮ ದೇವರ ಬೆಟ್ಟದ ಬಂಡೆಗಳು ರಚನೆಯಾಗಲಾರಂಭಿಸಿತ್ತು ಎಂದು ಸಂಶೋಧನಾ ವರದಿಗಳು ತಿಳಿಸಿವೆ.

ರಾಮನಗರಕ್ಕಿದೆ 200 ವರ್ಷಗಳ ಇತಿಹಾಸ!

ರೇಷ್ಮೆ ನಗರ ರಾಮನಗರಕ್ಕೆ 200ಕ್ಕೂ ಹೆಚ್ಚು ವರ್ಷಗಳ ಇತಿಹಾಸ ಇದೆ. ಶಿವರಾಮಗಿರಿ, ರಾಮಗಿರಿ ಅಂತ ಈ ಸ್ಥಳವನ್ನು ಗುರುತಿಸ ಲಾಗುತ್ತಿತ್ತು. ಟಿಪ್ಪು ಸುಲ್ತಾನನ ಕಾಲದಲ್ಲಿ ಈ ಪ್ರದೇಶವನ್ನು ಶಂಷೇರಾಬಾದ್ ಅಂತಲೂ ಕರೆಯಲಾಗುತ್ತಿತ್ತು. 1800ರಲ್ಲಿ ಕ್ಲೋಸ್‌ಪೇಟೆ ಎಂದು ನಾಮಕರಣವಾಯಿತು. ಕೆಂಗಲ್ ಹನು ಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ವೇಳೆ ರಾಮನಗರ ಎಂದು ನಾಮಕರಣವಾಗಿದೆ.

50 ಕಿಮಿ ಉದ್ದದ ಬೆಟ್ಟದ ಆಳದಲ್ಲಿದೆಯೇ ಚಿನ್ನದ ನಿಕ್ಷೇಪ?

ಶ್ರೀರಾಮ ದೇವರ ಬೆಟ್ಟ ಉತ್ತರ ದಕ್ಷಿಣ ದಿಕ್ಕಿನಲ್ಲಿ ಸುಮಾರು 50 ಕಿಮೀ ಉದ್ದಕ್ಕೆ ಚಾಚಿಕೊಂಡಿದೆ. ಭೂ ಮಟ್ಟದಿಂದ 130 ಮೀಟರ್ ಎತ್ತರವಿದೆ. ಬೆಟ್ಟದ ಪಶ್ಚಿಮದ ಕಡೆಯ ಬಂಡೆ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳ ಅದಿರಿನಿಂದ ಕೂಡಿದೆ. ಶ್ರೀರಾಮದೇವರ ಬೆಟ್ಟದ ಬಂಡೆಗಳು ಪದರಗಳಿಂದ ಕೂಡಿದೆ. ಬೆಟ್ಟದ ಆಳದಲ್ಲಿ ಪದರಗಳ ನಡುವಿನ ಬಿರುಕುಗಳಲ್ಲಿ ಖನಿಜಗಳನ್ನು ಹೊತ್ತ ಬಿಸಿ ದ್ರವಗಳು ಸಂಗ್ರಹವಾಗಿದೆ. ಈ ಪೈಕಿ ಚಿನ್ನವೂ ಇದೆ ಎಂದು ಸಂಶೋಧನಾ ವರದಿಗಳು ಹೇಳುತ್ತಿವೆ. ಹೀಗಾ ಗಿಯೇ ಶ್ರೀರಾಮ ದೇವರ ಬೆಟ್ಟವನ್ನು ಭೂ ವಿಜ್ಞಾನ ವಿಶೇಷ ಎಂದು ಕರೆಯುತ್ತಾರೆ. ಚಿನ್ನ ತುಂಬಿದ ಶಿಲಾಖಂಡರಾಶಿಗಳಿಂದ ಸಮೃದ್ದವಾ ಗಿರುವ ಇವುಗಳನ್ನು "ಚಿನ್ನವನ್ನು ಹೊಂದಿರುವ ಶಿಸ್ಟ್ ಬೆಲ್ಟ್" ಎಂದು ಭೂವಿಜ್ಞಾನಿಗಳು ಕರೆಯುತ್ತಾರೆ.

ಅದ್ದೂರಿ ರಾಮೋತ್ಸವಕ್ಕೆ ಸಾಕ್ಷಿಯಾಗಲಿದೆ ರಾಮನಗರ

ಶಾಸಕ ಇಕ್ಬಾಲ್ ಹುಸೇನ್ ನೇತೃತ್ವದಲ್ಲಿ ಜ.15ರಿಂದ 18ರವರೆಗೆ ರಾಮೋತ್ಸವ ಕಾರ್ಯ ಕ್ರಮ ಅದ್ದೂರಿಯಾಗಿ ನಡೆಯುತ್ತಿದೆ. ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿ ಕ್ಷೇತ್ರದ ನಾಗರೀಕರನ್ನು ಒಳಗೊಳ್ಳುವಂತೆ ಕಾರ್ಯಕ್ರಮ ರೂಪಿಸಿದ್ದಾರೆ. ಶ್ರೀರಾಮ ತಾರಕ ಯಜ್ಞ, ಗ್ರಾಮ ದೇವತಾ ಮೂರ್ತಿಗಳ ಮೆರವಣಿಗೆ ಮುಂತಾದ ಧಾರ್ಮಿಕ ಚಟುವಟಿಕೆಗಳನ್ನು ಆಯೋಜಿಸಿದ್ದಾರೆ. ಜಾತಿ, ಧರ್ಮ, ಪಕ್ಷ ಬೇದ ಮರೆತು ರಾಮೋತ್ಸವವನ್ನು ಆಚರಿಸಿ ಎಂದು ಅವರು ಕರೆ ನೀಡಿದ್ದಾರೆ. ಸಾರ್ವಜನಿಕರು ಸ್ಪಂದಿಸುತ್ತಿದ್ದಾರೆ.

ವಕೀಲರ ಸಂಘದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ

ರಾಮನಗರ: ಭಾರತದ ಆಧ್ಯಾತ್ಮಿಕತೆಯ ನಂದಾದೀಪವನ್ನು ಅದಮ್ಯ ದೇಶಭಕ್ತಿಯ ಕಿಚ್ಚಿನೊಂದಿಗೆ ಬೆರೆಸಿ, ಅಸದೃಶ ವಿಚಾರಧಾರೆಯ ಕ್ಷಾತ್ರತೇಜದ ಜ್ವಾಲಾಗ್ನಿಯನ್ನು ಪ್ರಜ್ವಲಿಸಿದ ಮಹಾನ್ ದಾರ್ಶನಿಕ ಸ್ವಾಮಿ ವಿವೇಕಾನಂದರು ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ಕೆಂಪಯ್ಯ ಹೇಳಿದರು.

ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿಯ ಅಂಗವಾಗಿ ಆಯೋಜನೆಯಾಗಿದ್ದ ರಾಷ್ಟ್ರೀಯ ಯುವ ದಿನ ಆಚರಣೆಯ ವೇಳೆ ದೀಪ ಬೆಳಗಿ, ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಭಾರತದ ಯುವಶಕ್ತಿಯ ನಿರಂತರ ಪ್ರೇರಣಾ ಸ್ವರೂಪವಾಗಿರುವ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು, ನಮ್ಮ ವ್ಯಕ್ತಿತ್ವ ನಿರ್ಮಾಣ ಮತ್ತು ರಾಷ್ಟ್ರಸೇವೆಯ ಕರ್ತವ್ಯಗಳ ಪಾಲನೆಯ ನಿಟ್ಟಿನಲ್ಲಿ, ನಮ್ಮ ದೃಢ ಸಂಕಲ್ಪವನ್ನು ಈ ರಾಷ್ಟ್ರೀಯ ಯುವ ದಿನದಂದು ಪುನರುಚ್ಚರಿಸೋಣ ಎಂದು ಅವರು ಕರೆ ನೀಡಿದರು. ಈ ವೇಳೆ ಹಿರಿಯ ವಕೀಲರುಗಳಾದ ಸುಬ್ಬಾಶಾಸ್ತ್ರಿ, ರಂಗಸ್ವಾಮಿ, ಟಿ.ಕೆ.ಶಾಂತಯ್ಯ, ಶಿವಣ್ಣಗೌಡ ಮುಂತಾದವರು ವಿವೇಕಾನಂದ ಸ್ವಾಮೀಜಿ ಅವರು ಬದುಕು, ಅವರ ವಿಚಾರಧಾರೆಗಳ ಬಗ್ಗೆ ಮಾತನಾಡಿದರು. ವಕೀಲರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಎಲ್ಲಾ ಸದಸ್ಯರಿಗೂ ವಿದ್ಯುತ್ ವಾಣಿ ಎಂಬ ಕಿರು ಹೊತ್ತಿಗೆಯನ್ನು ವಿತರಿಸಲಾಯಿತು.

ಜ.23ಕ್ಕೆ ಕಲ್ಟ್ ಚಿತ್ರ ತೆರೆಗೆ

ಮೈಸೂರು: ಲೋಕಿ ಸಿನಿಮಾಸ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ ಕಲ್ಟ್ ಚಲನಚಿತ್ರವು ರಾಜ್ಯದಾದ್ಯಂತ ಜ.23ರಂದು ತೆರೆ ಕಾಣಲಿದೆ ಎಂದು ನಾಯಕ ನಟ ಝೈದ್ ಖಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಭಿನ್ನ ಕಥಾಂದರವನ್ನು ಹೊಂದಿರುವ ಚಿತ್ರವಾಗಿದ್ದು, ನಾನು ಮೂರು ರೀತಿಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತೇನೆ. ನಟಿ ರಚಿತಾ ರಾಮ್ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಾರಾಗಣದಲ್ಲಿ ರಂಗಾಯಣ ರಘು, ಮಲೈಕಾ ಅಭಿನಯಿಸಿದ್ದಾರೆ ಎಂದರು. ಈ ಹಿಂದೆ ಮಾಡಿದ ಚಿತ್ರಕ್ಕೂ ಇದಕ್ಕೂ ಸಾಕಷ್ಟು ವ್ಯತ್ಯಾಸವಿದ್ದು, ಇತ್ತೀಚಿನ ದಿನಗಳಲ್ಲಿ ಪ್ರೀತಿಯಿಂದ ಮೋಸ ಹೋಗುತ್ತಿರುವ ವರ್ಗದ ಕುರಿತು ಚಿತ್ರ ಕಥೆ ಹೆಣೆಯಲಾಗಿದೆ. ಈಗಾಗಲೇ ಚಿತ್ರದ ಟೀಸರ್ ಮತ್ತು ಹಾಡುಗಳು ಬಿಡುಗಡೆಯಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಟ್ಟಾರೆ ಕುಟುಂಬ ಸಮೇತ ಚಿತ್ರವನ್ನು ನೋಡಬಹುದು ಎಂದರು. ರಾಜಕೀಯ ಪ್ರವೇಶ ವಿಚಾರವಾಗಿ ಪ್ರತಿಕ್ರಿಯಿಸಿ, ನನಗೆ ರಾಜಕೀಯ ಇಷ್ಟ ಇಲ್ಲ. ಈ ಹಿಂದೆಯೇ ಸಿದ್ದರಾಮಯ್ಯ ಅವರು 2023ರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಫಾರಂ ನೀಡಿದ್ದರೂ. ನಾನು ಅದನ್ನು ತೆಗೆದು ನೋಡಲಿಲ್ಲ. ರಾಜಕೀಯಕ್ಕೆ ಬರಬೇಕು ಎಂದು ನಿರ್ಧರಿಸಿದರೆ, ರಾಜ್ಯದ ಕಿರಿಯ ಶಾಸಕನಾಗುತ್ತಿದೆ. ಆದರೆ, ನನಗೆ ಅದು ಇಷ್ಟ ಇಲ್ಲ. ಸಿನಿಮಾದಲ್ಲಿಯೇ ಮುಂದುವರೆಯುತ್ತೇನೆ ಎಂದು ಸ್ಪಷ್ಟಪಡಿಸಿದರು.

ವಿವೇಕಾನಂದರು ಯುವಜನತೆಗೆ ಸ್ಪೂರ್ತಿ

ರಾಮನಗರ: ಸ್ವಾಮಿ ವಿವೇಕಾನಂದರು ಮಾನವೀಯ ಮೌಲ್ಯಗಳ ಜೊತೆಗೆ ಸಮಗ್ರ ಏಕತೆಯ ಚಿಂತನಾ ಸಿದ್ಧಾಂತವನ್ನು ವಿಶ್ವಕ್ಕೆ ಬೋಧಿಸಿ ಯುವಜನತೆಗೆ ಸ್ಪೂರ್ತಿಯ ಚಿಲುಮೆಯಾಗಿದ್ದಾರೆ. ಸ್ವಾಮಿ ವಿವೇಕಾನಂದರ ಚಿಂತನೆ, ಆದರ್ಶ ಬದುಕು ಇಡೀ ವಿಶ್ವಕ್ಕೆ ದಾರಿದೀಪವಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಭಿಪ್ರಾಯಪಟ್ಟರು.

ನಗರಸಭೆಯಲ್ಲಿ ಸೋಮವಾರ ನಡೆದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯ ಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ಸ್ವಾಮಿ ವಿವೇಕಾ ನಂದರು ಯುವಜನರಿಗೆ ಸ್ಪೂರ್ತಿಯಾಗಿದ್ದರು. ಪ್ರತಿಯೊಬ್ಬರೂ ಅವರ ತತ್ವ, ಆದರ್ಶ, ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡು ಗುರಿ ಸಾಧಿಸಬೇಕು ಎಂದ ಕರೆ ನೀಡಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿ ಯಲ್ಲಿದ್ದ ನಾಯಕರಿಗೆ ಸ್ವಾಮಿ ವಿವೇಕಾನಂ ದರೇ ಸ್ಪೂರ್ತಿಯ ಸೆಲೆಯಾಗಿದ್ದರು. ರವೀಂ ದ್ರನಾಥ್ ಟ್ಯಾಗೋರ್, ಮಹಾತ್ಮ ಗಾಂಧೀಜಿ ಅವರು ವಿವೇಕಾನಂದರ ಚಿಂತನೆಗೆ ಪ್ರಭಾ ವಿತರಾಗಿದ್ದರು. ಹೀಗಾಗಿ ಅವರ ಆದರ್ಶಗ ಳನ್ನು ಯುವಕರು ಜೀವನದಲ್ಲಿ ಮೈಗೂಡಿಸಿ ಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯ ಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸದಸ್ಯರಾದ ಜಯಲಕ್ಷ್ಮಮ್ಮ, ನರಸಿಂಹ, ಅಜ್ಮತ್, ಜೆಡಿಎಸ್ ಮುಖಂಡ ಮಾವಿನಸಸಿ ವೆಂಕಟೇಶ್, ದಲಿತ ಮುಖಂಡ ಶಿವಶಂಕರ್, ನಗರಸಭೆ ಅಧಿಕಾರಿ ವಿಜಯಕುಮಾರ್, ನಟರಾಜೇಗೌಡ ಸೇರಿದಂತೆ ಹಲವರಿದ್ದರು.

ಶಾಲಾ ವಾಹನ, ಆಟೋ ಚಾಲಕರಿಗೆ ಸನ್ಮಾನ

ರಾಮನಗರ: ಉಳಿ ಪೆಟ್ಟು ಕೊಟ್ಟು, ರೂಪ ನೀಡಿದ ನಂತರವಷ್ಟೇ ಸಾಧಾರಣ ಕಲ್ಲು ದೇವತಾ ಮೂರ್ತಿಗಳ ರೂಪ ಪಡೆಯುತ್ತವೆ. ಅದೇ ರೀತಿ ವಿದ್ಯಾಸಂಸ್ಥೆಗಳು ಮಕ್ಕಳಲ್ಲಿ ಅಕ್ಷರ ಜ್ಞಾನ ತುಂಬಿ, ಶಿಸ್ತು ರೂಢಿಸುತ್ತವೆ. ಇಂತಹ ಮಕ್ಕಳು ಸತ್ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

ನಗರದ ಹೋಲಿ ಕ್ರೆಸೆಂಟ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಸಮಾರಂ ಭದಲ್ಲಿ ಅವರು ಮಾತನಾಡಿದರು. ಮಕ್ಕಳ ಭವಿಷ್ಯ ರೂಪಿ ಸುವಲ್ಲಿ ಶಿಕ್ಷಕರು ಮಾತ್ರವಲ್ಲದೆ ಪೋಷಕರ ಜವಾ ಬ್ದಾರಿಯೂ ಹೆಚ್ಚಾಗಿದೆ ಎಂದರು. ಶಾಲಾ ವಾರ್ಷಿಕೋತ್ಸವ ಮಕ್ಕಳ ಪಾಲಿಗೆ ಹಬ್ಬ ಇದ್ದಂತೆ. ಪ್ರತಿಭೆಗಳ ಅನಾವರಣಕ್ಕೂ ಉತ್ತಮ ವೇದಿಕೆಯಾಗಿದೆ. ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾಗುವ ಪ್ರತಿಭಾನ್ವಿತರಿಗೆ ಗೌರವಿಸುವ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು. ಇದೇ ರೀತಿ ಮಕ್ಕಳ ಆದಿಯಾಗಿ ಎಲ್ಲ ವಯೋಮಾನದವರ ಪ್ರತಿಭೆ ಅನಾವರಣಕ್ಕೆ ರಾಮೋತ್ಸವ ವೇದಿಕೆ ಕಲ್ಪಿಸುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಇಕ್ಬಾಲ್ ಹುಸೇನ್ ಮನವಿ ಮಾಡಿದರು.

ಮಕ್ಕಳು ಸಮಾಜದ ಆಸ್ತಿ: ಅಲ್ತಾಫ್ ಅಹಮದ್

ಹೋಲಿ ಕ್ರೆಸೆಂಟ್ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಅಲ್ತಾಫ್ ಅಹಮದ್ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಹೋಲಿ ಕ್ರೆಸೆಂಟ್ ಶಾಲೆ ತನ್ನದೇ ಆದ ಛಾಪು ಮೂಡಿಸಿದೆ. ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ರೂಪಿಸಲು ಪಣ ತೊಟ್ಟಿದ್ದೇವೆ. ಈ ಶಾಲೆಯಲ್ಲಿ ವ್ಯಾಸಂಗ ಮಾಡಿದವರು ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ ಎಂದರು. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರು ಮಾತ್ರವಲ್ಲದೆ ಪೋಷಕರ ಜವಾಬ್ದಾರಿಯೂ ಹೆಚ್ಚಿದೆ. ಮಕ್ಕಳೇ ನಮಗೆ ಮತ್ತು ಸಮಾಜಕ್ಕೆ ನಿಜವಾದ ಆಸ್ತಿಯಾಗಿದ್ದಾರೆ. ಮಕ್ಕಳು, ಯುವ ಸಮುದಾಯ ಮಾದಕ ವಸ್ತುಗಳಿಗೆ ದಾಸರಾಗದಿರುವಂತೆ ಸಮಾಜ ಎಚ್ಚರವಹಿಸಬೇಕಾಗಿದೆ ಎಂದರು.

ಆಟೋ ಚಾಲಕರಿಗೆ ಸನ್ಮಾನ

ಸಂಸ್ಥೆಯ ಅಧ್ಯಕ್ಷೆ ಡಾ. ಶಾಜಿಯಾ ಮಾತನಾಡಿದರು. ಈ ಸಂದರ್ಭದಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಡಯಟ್‌ನ ಕೆಟಿಬಿಎಸ್ ವ್ಯವಸ್ಥಾಪಕ ನಿರ್ದೇಶಕ ಮಾದೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ, ಪಿಯು ವಿಭಾಗದ ಡೀನ್ ಡಾ. ಫಕ್ರುದ್ದೀನ್, ಪ್ರಾಂಶುಪಾಲರಾದ ಸ್ಟಾನ್ಲಿ ಪಾಲ್, ಶಾಲೆಯ ಪ್ರಾಂಶುಪಾಲರಾದ ಯೇಸುದಾಸ್, ಉಪ ಪ್ರಾಂಶುಪಾಲ ಲತಾ ಆನಂದ್ , ಉಪನ್ಯಾಸಕ ಅರುಣ್ ಕವಣಾಪುರ ಮತ್ತಿತರರು ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ಬಾಹುಬಲಿ, ಅವತಾರ್, ಮೈಕೇಲ್ ಜಾಕ್ಸನ್, ಲಯನ್, ಫೈಯರ್, ಡೆವಿಲ್ ವೇಷಧಾರಿಗಳಾಗಿ ಹೆಜ್ಜೆ ಹಾಕಿದ ಮಕ್ಕಳ ನೃತ್ಯ ನೆರೆದಿದ್ದ ಪೋಷಕರನ್ನು ಮಂತ್ರ ಮುಗ್ದರನ್ನಾಗಿಸಿತು. ವಿವಿಧ ಶೈಲಿಯ ನೃತ್ಯ ಸಂಯೋಜನೆ ಹಾಗೂ ಮಕ್ಕಳ ಪ್ರತಿಭೆಗೆ ನೆರೆದಿದ್ದ ಸಾವಿರಾರು ಪೋಷಕರು ಸಾಕ್ಷಿಯಾದರು. ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಾಲಾ ವಾಹನ ಮತ್ತು ಆಟೋ ಚಾಲಕರನ್ನು ಸನ್ಮಾನಿಸಲಾಯಿತು.

ಸಮುದಾಯದ ಮೇಲೆ ಹಲ್ಲೆ

ದೂರು ದಾಖಲಿಸದ ಅಧಿಕಾರಿಗಳು

ಮೈಸೂರು: ಪರಿಶಿಷ್ಟ ಜಾತಿ ಅಲೆಮಾರಿ ಕೊರಮ ಜನಾಂಗದ ಮಹಿಳೆ ಮೇಲೆ ಮಾರಣಾಂತಿಕವಾಗಿ ಹಲ್ಲೇ ನಡೆದು ಹದಿನೈದು ದಿನ ಕಳೆದರೂ ಆರೋಪಿಗಳನ್ನು ಬಂಧಿಸದೇ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಪೊಲೀಸ್ ಅಧಿಕಾರಿಗಳು ಮೀನಾಮೇಷ ಎಣಿಸು ತ್ತಿದ್ದಾರೆ ಎಂದು ಮೈಸೂರು ಜಿಲ್ಲಾ ಕೊರಮ-ಕೊರಚ ಮಹಾಸಂಘದ ಅಧ್ಯಕ್ಷ ಡಿ.ಎನ್.ಮುತ್ತುರಾಜ್ ದೂರಿದರು.

ಪತ್ರಿಕಾಗೋಷ್ಠಿ ನಡೆಸಿದ ಅವರು, ಹುಣಸೂರು ತಾಲೂಕಿನ ತೊಂಡಾಳ್ ಗ್ರಾಮದ ನಿವಾಸಿ, ಕೊರಮ ಜನಾಂಗದ ಸಾಕಮ್ಮ ಅವರ ಮೇಲೆ ನೆರೆಯ ಮನೆಯ ಒಕ್ಕಲಿಗ ಸಮುದಾಯದ ಭಾಗ್ಯಮ್ಮ ಮತ್ತು ಅವರ ಪುತ್ರ ಮಾರುತಿ ಎಂಬುವರು ಡಿ.26 ರಂದು ಏಕಾಏಕಿ ಸಾಕಮ್ಮ ಅವರ ಮನೆಗೆ ನುಗ್ಗಿ ಹಲ್ಲೆ ನಡೆಸಿ, ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ ಎಂದರು. ಹಲ್ಲೆಗೊಳಗಾದ ಸಾಕಮ್ಮ ಮಾತನಾಡಿ, ಮನೆಯೊಳಗಿನ ನೀರೊಲೆ ಬಳಿ ಕುಳಿತಿದ್ದ ನನ್ನ ಮೇಲೆ ಏಕಾಏಕಿ ಮಾರುತಿ ಮತ್ತು ಭಾಗ್ಯಮ್ಮ ಹಲ್ಲೆ ಮಾಡಿದರು. ರಸ್ತೆಯ ಹೊರಗೆ ನನ್ನನ್ನು ಎಳೆದು ತಂದು ಹೊಡೆದರಲ್ಲದೆ ಮನಸೋ ಇಚ್ಚೆ ಬಾಯಿಗೆ ಬಂದಂತೆ ಬೈದು ದೈಹಿಕವಾಗಿ ಕುಗ್ಗಿಸಿದ್ದಾರೆ. ಎಂದು ಕಣ್ಣೀರು ಹಾಕಿದರು. ಸುದ್ದಿಗೋಷ್ಠಿಯಲ್ಲಿ ತೊಂಡಾಳ್ ಗ್ರಾಮದ ಯಜಮಾನರಾದ ಮುಕುಂದಶೆಟ್ಟಿ, ಗ್ರಾಮಸ್ಥರಾದ ಮುದ್ದಶೆಟ್ಟಿ, ಆರ್. ಅಶೋಕ್, ಮಹೇಶ್, ಪಿರಿಯಾಪಟ್ಟಣ ತಾಲ್ಲೂಕು ಕುಳುವ ಮಹಾಸಂಘದ ಶ್ರೀನಿವಾಸ್, ವಿಶ್ವನಾಥ್ ಮತ್ತಿತರರಿದ್ದರು.

ಭೋಗಾಪುರ ಗ್ರಾಮಸ್ಥರಿಂದ ಎಚ್ಚರಿಕೆ

ಎಂಎಸ್ಐಎಲ್ ಅಂಗಡಿ ರದ್ದತಿಗೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ: ತಾಲೂಕಿನ ಭೋಗಾಪುರ ಗ್ರಾಮದ ಮುಖ್ಯ ರಸ್ತೆಯಲ್ಲಿ ಎಂಎಸ್ಐಎಲ್ ಅಂಗಡಿ ರದ್ದುಪಡಿಸುವಂತೆ ಒತ್ತಾಯಿಸಿ ಭೋಗಾ ಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದ ಗೇಟ್ ನಿಂದ ಗ್ರಾಮಕ್ಕೆ ಹೋಗುವ ರಸ್ತೆಯ ಬದಿಯಲ್ಲೇ ಆರಂಭಿಸಲು ಸಿದ್ಧಗೊಂಡಿರುವ ಮದ್ಯದಂಗಡಿ ಮುಂಭಾಗದಲ್ಲಿ ಶಾಮಿಯಾನ ಹಾಕಿ ಪ್ರತಿಭಟನೆ ನಡೆಸಿ ಬೇಡ ಬೇಡ ಸಾರಾಯಿ ಅಂಗಡಿ 'ಎಂದು ಅಬ್ಕಾರಿ ಇಲಾಖೆ, ಜಿಲ್ಲಾಡಳಿತ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು. ಮುಖಂಡ ಪು.ಶ್ರೀನಿವಾಸ ನಾಯಕ,ಎಪಿಎಂಸಿ ಮಾಜಿ ಅಧ್ಯಕ್ಷ ಭೋಗಾಪುರ ಡಿ.ನಾಗೇಂದ್ರ ಮಾತನಾಡಿ, ಭೋಗಾಪುರ ಮುಖ್ಯ ರಸ್ತೆಯಲ್ಲಿ ತೆರೆಯಲು ಉದ್ದೇಶಿರುವ ಎಂಎಸ್ಐಎಲ್ ಮದ್ಯದಂಗಡಿಯನ್ನು ರದ್ದುಪಡಿಸುವಂತೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳು ಸನ್ನದುದಾರರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಹೊರತು ಗ್ರಾಮಸ್ಥರ ಪರ ಸ್ಪಂದಿಸುವ ಕೆಲಸ ಮಾಡಿಲ್ಲ. ಕ್ಷೇತ್ರದ ಶಾಸಕರು, ಸಂಸದರು, ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ಕೂಡ ಬೇಡ ಎಂದು ಹೇಳಿದ್ದಾರೆ. ಮದ್ಯದಂಗಡಿ ರದ್ದು ಪಡಿಸುವ ತನಕ ನಿರಂತರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಮದ್ಯದಂಗಡಿ ಆರಂಭದಿಂದ ಗ್ರಾಮಕ್ಕೆ ಒಳ್ಳೆಯದು ಆಗಲ್ಲ. ಇಲ್ಲಿ ಅಂಗಡಿ ತೆರೆಯಲು ಬಿಡಲ್ಲ. ಇಲ್ಲಿ ಸಂಜೆ ವೇಳೆಯಲ್ಲಿ ಜಿಂಕೆ, ಕಾಡುಪ್ರಾಣಿ ಓಡಾಡುತ್ತವೆ.ಮಹಿಳೆಯರ ಸುರಕ್ಷತೆ, ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ, ಶೈಕ್ಷಣಿಕ ಅಭಿವೃದ್ಧಿಗೆ ಅಡ್ಡಿ, ಅಪಘಾತಗಳ ಹೆಚ್ಚಳ, ನೆಮ್ಮದಿ ಹಾಳು ಮಾಡುವ ಕಾರಣಗಳಿಗಾಗಿ ಈ ಅಂಗಡಿ ತೆರೆಯಬಾರದು ಎಂದು ಆಗ್ರಹಿಸಿದರು.

ಭೇಟಿ: ಅಬ್ಕಾರಿ ಡಿವೈಎಸ್ಪಿ ಜಯದೇವು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಕಳೆದ 6 ತಿಂಗಳ ಹಿಂದೆ ಅಂಗಡಿ ಆರಂಭವಾಗಬೇಕಿತ್ತು. ಸಾರ್ವಜನಿಕರ ದೂರನ್ವಯ ಆರಂಭ ಮಾಡಿರಲಿಲ್ಲ. ಇಂದು ಗ್ರಾಮಸ್ಥರು ವಿರೋಧ ವ್ಯಕ್ತ ಪಡಿಸಿದ್ದೀರಿ. ಇದನ್ನು ಇಲಾಖೆ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅಂಗಡಿ ರದ್ದುಪಡಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನಾನಿರತರು ಪ್ರತಿಭಟನೆ ಕೈಬಿಟ್ಟರು. ಪ್ರತಿಭಟನೆಯಲ್ಲಿ ಮುಖಂಡರಾದ ಪು.ಶ್ರೀನಿವಾಸನಾಯಕ, ತಾ.ಪಂ. ಮಾಜಿ ಸದಸ್ಯ ಮಹಾಲಿಂಗು, ಶ್ರೀನಿಧಿ. ರಾಜ್‌ಗೋಪಾಲ್, ಶಿವಣ್ಣ, ಗ್ರಾ.ಪಂ.ಸದಸ್ಯ ರಾಜಮ್ಮ, ಚಿಕ್ಕಣ್ಣ, ದೊರೆಸ್ವಾಮಿ, ಕಂದಹಳ್ಳಿ ನಾರಾಯಣ, ಮಧುಆಚಾರ್, ಕುಮಾರಸ್ವಾಮಿ, ಚನ್ನಕೇಶವ, ಮಹೇಶ್, ಸುರೇಶ್, ಗುರುಲಿಂಗಯ್ಯ, ಸೋಮಶೇಖರ್, ರಾಜೇಶ್, ಪರಮೇಶ ಇತರರು ಭಾಗವಹಿಸಿದ್ದರು.

ದೀರ್ಘಾವದಿ ಮುಖ್ಯಮಂತ್ರಿ ಎಂಬ ದಾಖಲೆ

ಸಿಎಂ. ಸಿದ್ದರಾಮಯ್ಯ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿ ಸಂಭ್ರಮಾಚರಣೆ

ಕೆ.ಆರ್.ಪೇಟೆ: ಡಿ.ದೇವರಾಜ ಅರಸು ಅವರ ಹೆಸರಿನಲ್ಲಿದ್ದ ಹೆಚ್ಚು ದಿನ ಆಡಳಿತ ಅವಧಿ ದಾಖಲೆಯನ್ನು ಹಿಂದಿಕ್ಕಿ ಅರಸು ಅವರಿಗಿಂತಲೂ ಸುದೀರ್ಘ ದಿನಗಳ ಆಡಳಿತ ನಡೆಸಿದ ಮುಖ್ಯಮಂತ್ರಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾದ ಸಿಎಂ. ಸಿದ್ದರಾಮಯ್ಯ ಅವರಿಗೆ ಶುಭಕೋರಿ ಕೆ.ಆರ್.ಪೇಟೆ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಳೆತ್ತರದ ಕಟೌಟ್ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ ಸಂಭ್ರಮಾಚರಣೆ ಮಾಡಲಾಯಿತು.

ಕರ್ನಾಟಕ ರಾಜ್ಯ ಕೈಮಗ್ಗ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ನೇತೃತ್ವದಲ್ಲಿ ಕೆ.ಆರ್.ಪೇಟೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಸೇರಿದ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿ, ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡಿ ಸಂಭ್ರಮಿಸಿದರು.

ನಂತರ ಪಟ್ಟಣದ ಶ್ರವಣಬೆಳಗೊಳ ರಸ್ತೆಯ ಸುವರ್ಣ ನಿಂಗೇಗೌಡ ಸಮುದಾಯ ಭವನದಲ್ಲಿ ಸಿಎಂ ದೀರ್ಘಾವದಿ ದಾಖಲೆ ಕುರಿತಾದ ಬಹಿರಂಗ ಸಭೆ ನಡೆಸಿ ಮುಖ್ಯಮಂತ್ರಿಗಳ ಸಾಧನೆಗಳನ್ನು ಕಾಂಗ್ರೆಸ್ ಮುಖಂಡರು ಗುಣಗಾನ ಮಾಡಿದರು. ಕರ್ನಾಟಕ ರಾಜ್ಯ ಕೈಮಗ್ಗ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್‌ಮಾತನಾಡಿ, ಸಮಾಜದ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಿದ ಅಪರೂಪದ ರಾಜಕಾರಣಿ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ. ಅತಿ ಹೆಚ್ಚು ಭಾರಿ ಬಜೆಟ್ ಮಂಡಿಸಿದ ದಾಖಲೆ ಇವರ ಹೆಸರಿನಲ್ಲಿದ್ದು ಈ ಮೂಲಕ ಶಿಸ್ತುಬದ್ದ ಆರ್ಥಿಕ ನೀತಿ ಮತ್ತು ಎಲ್ಲರನ್ನೂ ಒಳಗೊಂಡಿರುವುದು ಸಿಎಂ ಅವರ ಆಡಳಿತದ ಯಶಸ್ಸಿನ ಗುಟ್ಟು ಎಂದರು. ಹೆಚ್ಚು ಬಜೆಟ್ ಮಂಡಿಸಿದ ದಾಖಲೆ ಜೊತೆಗೆ ಅತಿ ಹೆಚ್ಚು ದಿನಗಳ ಕಾಲ ಆಡಳಿತ ನಡೆದ ದಾಖಲೆಯನ್ನು ಮುಡಿಗೇರಿಸಿಕೊಂಡಿರುವ ಸಮಸ್ತ ಕರ್ನಾಟಕದ ಏಳುಕೋಟಿ ಕನ್ನಡಿಗರಿಗೆ ಹೆಮ್ಮೆ ತರುವ ವಿಚಾರವಾಗಿದೆ. ಮೊದಲ ಭಾರಿಗೆ ಮುಖ್ಯಮಂತ್ರಿ ಆದ ತಕ್ಷಣ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿ ಬಡವರ ಪಾಲಿನ ಅನ್ನರಾಮಯ್ಯ ಆದರು. ಅದೂ ಅಲ್ಲದೆ ಜನತೆಗೆ ನೀಡಿದ್ದ 165 ಭರವಸೆಗಳನ್ನೂ ಈಡೇರಿಸಿದರು. ಜೊತೆಗೆ ದಲಿತರು ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಮಾಡಿದ್ದ ಎಲ್ಲಾ ಸಾಲವನ್ನು ಮನ್ನಾ ಮಾಡಿದರು. ರೈತರು ವಿವಿಧ ಸಹಕಾರಿ ಬ್ಯಾಂಕುಗಳಲ್ಲಿ ಮಾಡಿದ್ದ 50ಸಾವಿರ ರೂವರೆಗಿನ ಎಲ್ಲಾ ಸಾಲಗಳನ್ನು ಮನ್ನ ಮಾಡುವ ಮೂಲಕ ರೈತರ ಸಾಲದ ಹೊರೆಯನ್ನು ಕಡಿಮೆ ಮಾಡಿದರು. ಎರಡನೇ ಭಾರಿ ಸಿಎಂ ಆಗಿರುವ ಸಿದ್ದರಾಮಯ್ಯ ಅವರು ಅಧಿಕಾರಕ್ಕೇರಿದ ಎರಡೇ ತಿಂಗಳಲ್ಲೇ ಐದೂ ಮಹತ್ತರ ಗ್ಯಾರಂಟಿ ಯೋಜನೆಗನ್ನು ಜಾರಿಗೊಳಿಸುವ ಮೂಲಕ ಎಲ್ಲಾ ವರ್ಗದ ಜನರುನೆಮ್ಮದಿಯಿಂದ ಜೀವನ ನಡೆಸುವಂತಹ ಉತ್ತಮ ಆಡಳಿತ ನೀಡಿದ ಧೀಮಂತ ನಾಯಕರಾಗಿರುವ ಸಿದ್ದರಾಮಯ್ಯ ಅವರು ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ತಮ್ಮದೇ ಆದ ವರ್ಚಸ್ಸು ಹೊಂದಿರುವ ಏಕೈಕ ರಾಜಕಾರಾರಣಿ ಎಂಬ ಬಿರುದನ್ನು ರಾಜಕೀಯ ವಿಶ್ಲೇಷಕರಿಂದ ಪಡೆದುಕೊಂಡಿದ್ದಾರೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಹಿಂದುಳಿದ ವರ್ಗದ ನನ್ನನ್ನು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡುವ ಅಹಿಂದ ವರ್ಗಕ್ಕೆ ಸಾಮಾಜಿಕ ನ್ಯಾಯ ನೀಡಿದ್ದಾರೆ. ಹಾಗಾಗಿ ಸಿಎಂ. ಸಿದ್ದರಾಮಯ್ಯ ಅವರಿಗೆ ಇನ್ನೂ ಹೆಚ್ಚಿನ ಕಾಲ ಮುಖ್ಯಮಂತ್ರಿಯಾಗಿ ಮುಂದೆ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಲು ನಾಡದೇವತೆ ಶ್ರೀ ಚಾಮುಂಡೇಶ್ವರಿ ತಾಯಿ ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಬಿ.ನಾಗೇಂದ್ರಕುಮಾರ್ ದೇವರಲ್ಲಿ ಪ್ರಾರ್ಥಿಸಿದರು. ನನಗೆ ಕೈಮಗ್ಗ ಅಭಿವೃದ್ಧಿ ನಿಗಮದ ಕ್ಯಾಬಿನೆಟ್ ದರ್ಜೆಯ ಅಧ್ಯಕ್ಷ ಸ್ಥಾನ ಸಿಗಲು ಸಹಕಾರ ನೀಡಿದ ಸಿಎಂ ಸಿದ್ದರಾಮಯ್ಯ, ಡಿಸಿಎಂ. ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಚೆಲುವರಾಯಸ್ವಾಮಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್ ಖಾನ್, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ನರೇಂದ್ರಸ್ವಾಮಿ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಬಿ.ನಾಗೇಂದ್ರಕುಮಾರ್ ತಿಳಿಸಿದರು.

ಅನಂತರ ಪಟ್ಟಣದ ಹೊರವಲಯದ ಸಾಧುಗೋನಹಳ್ಳಿ ಬಳಿ ಇರುವ ಮಾತೃಭೂಮಿ ಅನಾಥಾಶ್ರಮದಲ್ಲಿ ಮೊದಲ ಭಾರಿ ಮುಖ್ಯಮಂತ್ರಿ ಆದ ಕೂಡಲೇ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಭಕೋರಿ ಅನಾಥಾಶ್ರಮದ ವಯೋವೃದ್ದರಿಗೆ ಅನ್ನದಾಸೋಹ ನಡೆಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಕೆಯುಐಡಿಎಫ್ ಸಿ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್. ಅಂಬರೀಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎಲ್.ಕೆ. ಮಂಜುನಾಥ್, ತಾಲ್ಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಪಿ.ನಂಜುಂಡೇಗೌಡ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್, ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಜೆ.ಶಶಿಧರ್, ಮುಖಂಡರಾದ ಕಾವೇರಿ ನೀರಾವರಿ ನಿಗಮದ ಮಾಜಿ ನಿರ್ದೇಶಕ ಜಿ.ಕೆ.ರುಕ್ಮಾಂಗದ, ಜಿಲ್ಲಾ ಕಾಂಗ್ರೆಸ್ ವಕ್ತಾರ ಮಾದಾಪುರ ಡಾ.ರಾಮಕೃಷ್ಣೇಗೌಡ, ಜಿಲ್ಲಾ ಕಾರ್ಯದರ್ಶಿ ಟಿ. ಎನ್.ದಿವಾಕರ್, ತಾಲ್ಲೂಕು ಎಸ್ಸಿ ಕಾಂಗ್ರೆಸ್ ಅಧ್ಯಕ್ಷ ರಾಜಯ್ಯ, ಎಲ್.ಪಿ.ನಂಜಪ್ಪ, ಲೋಲಾಕ್ಷಿ ಜಗದೀಶ್, ವಿನುತ ಸುರೇಶ್, ಶಿವಮ್ಮ, ಬೊಮ್ಮೇನಹಳ್ಳಿ ಲತಾ, ಮಡುವಿನಕೋಡಿ ಗೌಸ್ ಖಾನ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಉಪಸ್ಥಿತರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ವಿಬಿ ರಾಮ್ ಜಿ ಯೋಜನೆ ಅನುಷ್ಠಾನ : ವಿ.ಸೋಮಣ್ಣ

ಚಾಮರಾಜನಗರ: ರಾಷ್ಟ್ರವ್ಯಾಪಿ ಉದ್ಯೋಗ ಅರಸಿ ಬರುವ ಜನನರಿಗೆ ನೆರವಾಗಲಿ ಎಂಬ ಉದ್ದೇಶ ದಿಂದ ವಿಬಿ ರಾಮ್ ಜಿ ಯೋಜನೆಯನ್ನು ನೂತನ ಕಾಯ್ದೆ ಯಡಿ ಬಲಪಡಿಸಲಾಗಿದೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಕಾರ್ಯ ನಿರತ ಪತ್ರಕರ್ತರ ಭವನ ದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಭಾಗವ ಹಿಸಿ ಮಾತನಾಡಿದ ಅವರು ಯೋಜನೆಯಲ್ಲಿ ಪಾರ ದರ್ಶಕತೆ ಕಾಪಾಡಿಕೊಳ್ಳುವುದು ಮತ್ತು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಹೊಸ ಕಲ್ಪನೆ ಯೊಂದಿಗೆ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ ಎಂದು ಹೇಳಿದರು. ನರೇಗಾ ಯೋಜನೆ ದುರ್ಬಲ ಗೊಂಡಿತ್ತು. ಕಳಪೆ ಗುಣಮಟ್ಟ, ಯೋಜನೆಗಳ ಜೊತೆಗ ಏಕೀಕರಣದ ಕೊರತೆ, ತಾತ್ಕಾಲಿಕ ರಸ್ತೆ ಗಳು, ಸಾಮಾಜಿಕ ಮತ್ತು ಆರ್ಥಿಕ ಆದಾಯವನ್ನು ಒದಗಿಸುವಲ್ಲಿ ವಿಫಲವಾಗಿದ್ದವು. 2013 ರ ಸಿಎಜಿ ವರದಿಯಲ್ಲಿ ವ್ಯಾಪಾಕ ಭ್ರಷ್ಟ ಚಾರ ನಡೆದಿದೆ ಎಂದು ವರದಿಯಾಗಿತ್ತು. ರಾಜ್ಯದಲ್ಲಿ 4.33 ಲಕ್ಷಕ್ಕೂ ಹೆಚ್ಚು ನಕಲಿ ಜಾಬ್ ಕಾರ್ಡುಗಳನ್ನು ಗುರುತಿಸಲಾ ಗಿತ್ತು. ಆದ್ದರಿಂದ ನರೇಂದ್ರಮೋದಿ ನೇತೃತ್ವದ ಕೇಂಸ್ರ ಸರಕಾರ ವಿಕಸಿತ ಭಾರತ ಜಿ ರಾಮ್ ಜಿ ಕಾಯ್ದೆ ಯನ್ನು ಜಾರಿಗೊಳಿಸಿದೆ ಎಂದು ಸಮರ್ಥಿಸಿಕೊಂ ಡರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್. ಮಹೇಶ್, ಮಾಜಿ ಶಾಸಕರಾದ ಸಿ.ಎಸ್.ನಿರಂಜನ್ ಕುಮಾರ್, ಎಸ್.ಬಾಲರಾಜ್, ಎಂ.ಆರ್.ಮಂಜು ನಾಥ್, ಮುಖಂಡರಾದ ಪ್ರೊ.ಕೆ.ಆರ್. ಮಲ್ಲಿಕಾರ್ಜು ನಪ್ಪ, ಎಂ. ರಾಮಚಂದ್ರ, ಇತರರು ಹಾಜರಿದ್ದರು.

ಸುಳ್ಳು ಆರೋಪ

ಯೋಜನೆಯನ್ನು ಪಾರದರ್ಶಕವಾಗಿ ಮತ್ತು ಸಮರ್ಥವಾಗಿ ಜಾರಿಗೊಳಿಸುವುದನ್ನು ಸಹಿಸದ ಪ್ರತಿಪಕ್ಷಗಳು ಸುಳ್ಳು ವದಂತಿಗಳನ್ನು ಹರಡುತ್ತಿವೆ. ಈ ಹಿನ್ನೆಲೆಯಲ್ಲಿ ರೈತರು ಮತ್ತು ಕಾರ್ಮಿಕರು ವಾಸ್ತವಾಂಶಗಳನ್ನು ಅರಿಯಬೇಕು ನರೇಗಾದಲ್ಲಿ 100 ಕೆಲಸದಿನಗಳಿತ್ತು. ಆದರೀಗ ಜಿ.ರಾಮ್ ಜಿ ಯಲ್ಲಿ 125 ದಿನಗಳಿಗೆ ಏರಿಸಲಾಗಿದೆ. ನರೇಗಾದಲ್ಲಿ ಯೋಜನೆ ಕಾಮಗಾರಿ ಬೇಡಿಕೆ ಆಧಾರದಲ್ಲಿತ್ತು. ಜಿ.ರಾಮ್ ಯೋಜನೆಯಡಿ ಕಾಮಗಾರಿ ಟಾರ್ಗೆಟ್ ಆಧಾರದ ಮೇಲೆ ನಡೆಯಲಿದೆ. ನರೇಗಾದಲ್ಲಿ ಟಾರ್ಗೆಟ್ ಇಲ್ಲದ ಕಾರಣ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಇಲ್ಲದಾಗಿತ್ತು. ಜಿ.ರಾಮ್ ಜಿ ಯೋಜನೆಡಿ ಟಾರ್ಗೆಟ್ ಇರುವುದರಿಂದ ಗುರಿ ಸಾಧಿಸದ ಅಧಿ ಕಾರಿಗಳ ಮೇಲೆ ಕ್ರಮ ಜರುಗಿಸಲು ಅವಕಾಶವಿದೆ ಜೊತೆಗೆ ಕೂಲಿ ಪಾವತಿಯನ್ನು ವಾರಕ್ಕೆ ಒಮ್ಮೆ ಅಥವಾ ಗರಿಷ್ಠ14 ದಿವಸಗಳ ಒಳಗೆ ಕಡ್ಡಾಯವಾಗಿ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದರು.

ಹೊಸ ಮಾರ್ಗಕ್ಕೆ ಜಾಗ ನೀಡುತ್ತಿಲ್ಲ

ಬೆಂಗಳೂರು-ಹೆಜ್ಜಾಲ, ಕನಕಪುರ- ಕೊಳ್ಳೇಗಾಲ- ಸಂತೇಮರಹಳ್ಳಿ ಮಾರ್ಗವಾಗಿ ಗಡಿ ಜಿಲ್ಲೆ ಚಾಮರಾಜನಗರ ಕ್ಕೆ ಹೊಸ ರೈಲ್ವೆ ಮಾರ್ಗಕ್ಕೆ ಶತ ಪ್ರಯತ್ನ ನಡೆಸುತ್ತಿದ್ದೇನೆ. ಆದರೆ ರಾಜ್ಯ ಸರಕಾರ ಭೂಮಿ ಕೊಡಲು ಉತ್ಸುಕತೆ ತೋರಿಸುತ್ತಿಲ್ಲ. ಈ ಮೊದಲು ಪ್ರಸ್ತಾಪಿಸಲಾಗಿದ್ದ ಕುಶಾಲನಗರ- ಮೈಸೂರು ರೈಲು ಮಾರ್ಗಕ್ಕೆ ರಾಜ್ಯ ಸರಕಾರದಿಂದ ಅಸಹಕಾರ ಮುಂದುವರಿ ದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹೆಗಲು ಮುಟ್ಟಿ ಕೊಳ್ಳುವುದನ್ನು ನಿಲ್ಲಿಸಿ

ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ ಎಂದು ಪರೋಕ್ಷವಾಗಿ ಕಾಂಗ್ರೆಸ್ ನಾಯಕರ ಕಾಲೆಳೆದ ಅವರು ಪ್ರತಿ ಯೊಂದು ಕಾರ್ಯಕ್ರಮದಲ್ಲೂ ರಾಜೀವ್, ಇಂದಿರಾಗಾಂಧಿ ಹೆಸರುಗಳನ್ನಿಟ್ಟುಕೊಂಡು ಜನ ರಿಗೆ ಮೋಸ ಮಾಡಿ ನಿಜವಾದ ಗಾಂಧಿ ಯವರನ್ನು ಮರೆತಿದ್ದಾರೆ ಎಂದು ಕಿಡಿಕಾರಿದರು.

ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಗುಣಮಟ್ಟದ ಶಿಕ್ಷಣ ಅಗತ್ಯ

ಜಿ.ಪಂ.ಉಪ ಕಾರ್ಯದರ್ಶಿ ಶೃತಿ | ಮರಿಯಾಲ ಶ್ರೀ ಮುರುಘ ರಾಜೇಂದ್ರಸ್ವಾಮಿ ಸಿಬಿಎಸ್‌ಇ ಶಾಲೆಯ 8ನೇ ವಾರ್ಷಿಕೋತ್ಸವ

ಚಾಮರಾಜನಗರ:ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣವನ್ನು ಪಡೆದು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ದಿಕ್ಕಿನಲ್ಲಿ ಪೋಷಕರು ಪಾತ್ರ ಮಹತ್ವಾದಾಗಿದೆ ಎಂದು ಜಿ.ಪಂ. ಉಪ ಕಾರ್ಯದರ್ಶಿ ಡಿ.ಸಿ. ಶೃತಿ ತಿಳಿಸಿದರು.

ನಗರದ ಹೊರ ವಲಯದಲ್ಲಿರುವ ಶ್ರೀ ಮುರುಘರಾಜೇಂದ್ರಸ್ವಾಮಿ ಸಿಬಿಎಸ್‌ಇ ಶಾಲೆಯ 8ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾ ಟಿಸಿ ಅವರು ಮಾತನಾಡಿದರು. ಶಿಕ್ಷಣ ದಿಂದ ಮಾತ್ರ ಮಗುವಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಬೇಕೆಂಬ ಉದ್ದೇಶದಿಂದ ನಗರ ಪ್ರದೇಶಗಳತ್ತ ಹೋಗುತ್ತಿ ದ್ದಾರೆ. ಚಾಮರಾಜನಗರ ಸಮೀಪದಲ್ಲಿರುವ ಮರಿಯಾಲ ಶ್ರೀ ಮುರುಘರಾಜೇಂದ್ರಸ್ವಾಮಿ ಸಿಬಿಎಸ್‌ಇ ಶಾಲೆಯು ಕಳೆದ 8 ವರ್ಷಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುವ ಜೊತೆಗೆ ಈ ಭಾಗದ ಮಕ್ಕಳ ಕಲಿಕೆಯಲ್ಲಿ ಪ್ರಗತಿ ಸಾಧಿಸಲು ಕಾರಣಕರ್ತವಾಗಿದೆ. ಮರಿಯಾಲ ಶ್ರೀಮಠವು ಅನ್ನ, ಜ್ಞಾನ ದಾಸೋಹಕ್ಕೆ ಹೆಚ್ಚಿನ ಅದ್ಯತೆ ನೀಡಿದೆ. ಇಂಥ ಶಾಲೆಗಳಲ್ಲಿ ಶಿಕ್ಷಣ ಪಡೆದಾಗ ಮಕ್ಕಳು ಸಹ ಸಂಸ್ಕಾರವಂತರಾಗುತ್ತಾರೆ. ಗುರುವಿನ ಮಾರ್ಗ ದರ್ಶನ ಮತ್ತು ಸಾಧಿಸುವ ಛಲ ವಿದ್ದರೆ ಯಶಸ್ಸು ನಮ್ಮದಾಗುತ್ತದೆ ಎಂದರು.

ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರು ಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸ್ಥಾಪನೆಯಾಗಿರುವ ನಮ್ಮ ಸಿಬಿಎಸ್‌ಇ ಶಾಲೆಯು ಸುತ್ತಮುತ್ತ ಲಿನ ಗ್ರಾಮದ ಮಕ್ಕಳಿಗೆ ಗುಣಮಟ್ಟದ ಅಂಗ್ಲ ಮಾಧ್ಯಮ ಶಿಕ್ಷಣವನ್ನು ನೀಡುವಲ್ಲಿ ಶ್ರಮಿಸು ತ್ತಿದೆ. ಸಿಬಿಎಸ್‌ಇ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಅದ್ಯತೆ ನೀಡುವ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಮತ್ತು ಮೌಲ್ಯಧಾರಿತ ಶಿಕ್ಷಣವನ್ನು ಕೊಡಿ ಸುವ ನಿಟ್ಟಿನಲ್ಲಿ ನಮ್ಮ ಶಾಲೆ ಆಡಳಿತ ಮಂಡಲಿ ಹಾಗೂ ಶಿಕ್ಷಕರ ವೃಂದ ಶ್ರಮಿಸುತ್ತಿದೆ ಎಂದರು.

ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟು ವಟಿಕೆಯು ಭಾಗವಹಿಸುವಂತೆ ಮಾಡಿ, ಅವರಲ್ಲಿ ಪ್ರಶ್ನೆ ಮಾಡುವ ಮತ್ತು ಪ್ರಯೋಗಾತ್ಮಕ ಚಟು ವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ವಿಜ್ಞಾನ ಮೇಳವನ್ನು ಆಯೋಜನೆ ಮಾಡಲಾಗುತ್ತದೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ವಿದ್ಯಾರ್ಥಿ ಗಳಿಗೆ ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡಲಾ ಗುತ್ತದೆ. ಒಟ್ಟಾರೆ ಮಗುವಿನ ವಿಕಸನಕ್ಕೆ ಅನು ಗುಣವಾಗಿ ಶಿಕ್ಷಣವನ್ನು ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಿಬಿಎಸ್‌ಇ ಶಾಲೆಯ ಪ್ರಿನ್ಸಿಪಾಲ್ ಎಚ್.ಎಂ.ಗಿರೀಶ್, ಸಂಸ್ಥೆಯ ಉಪಾ ಧ್ಯಕ್ಷರಾದ ಶ್ರೀ ಕುಮಾರಸ್ವಾಮಿ, ಬ್ರಹ್ಮದೇವ ಬುಕ್ ಡಿಪೋನ ಬ್ರಹ್ಮೇಶ್‌ಕುಮಾರ್, ನಿವೃತ ಮುಖ್ಯ ಶಿಕ್ಷಕ ಕೆ.ಎಸ್. ಮಹದೇವಸ್ವಾಮಿ, ಶಿಕ್ಷಕರಾದ ನಿರ್ಮಲ ನಾಗೇಂದ್ರ, ಶಿಕ್ಷಕ ವೃಂದವರು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು. ನಂತರ ಶಾಲೆ ಮಕ್ಕಳಿಂದ ಕಲಾ ವೈಭವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮೈಸೂರಿಗೆ ನಿರ್ಮಲಾ ಸೀತಾರಾಮನ್ 5 ಕೋಟಿ ಅನುದಾನ: ಯದುವೀರ್

ಮೈಸೂರು: ಯುವ ಸಮುದಾಯಕ್ಕೆ, ವಿದ್ಯಾರ್ಥಿಗಳ ಶೈಕ್ಷಣಿಕ, ವೈಜ್ಞಾನಿಕ ಉತ್ತೇಜನಕ್ಕಾಗಿ ಮೈಸೂರಿನಲ್ಲಿ ಪ್ಲಾನೆಟೋರಿಯಂ ನಿರ್ಮಾಣಕ್ಕೆ ಹಣಕಾಸು ಸಚಿವ ರಾದ ನಿರ್ಮಲಾ ಸೀತಾರಾಮನ್ ಐದು ಕೋಟಿ ರೂ. ಅನುದಾನವನ್ನು ಸಂಸದರ ನಿಧಿಯಿಂದ ಬಿಡುಗಡೆ ಮಾಡಿದ್ದಾರೆಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಕಾಸ್ಮೋಲಜಿ ಎಜುಕೇಷನ್ ಅಂಡ್ ರೀಸರ್ಚ್ ಟ್ರೇನಿಂಗ್ ಸೆಂಟರ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈಗ ಹೆಚ್ಚುವರಿ ಅನುದಾನ ಮಂಜೂರು ಮಾಡಿದ್ದಾರೆ. ಕಾಸ್ಮೋಸ್ ಪ್ಲಾನೆಟೇರಿಯಮ್ ಯೋಜನೆಯು ನಮ್ಮ ಯುವಜನರಿಗೆ ಕುತೂಹಲ, ಕಲಿಕೆ, ಸಂಶೋಧನೆ ಮತ್ತು ನಾವೀನ್ಯತೆಗೆ ಹೆಚ್ಚು ಒತ್ತು ನೀಡುತ್ತದೆ. ಈ ಪ್ರಮುಖ ಯೋಜನೆಯು ಮೈಸೂರಿನ ಪ್ರವಾಸಿ ತಾಣದ ಹೆಗ್ಗುರುತಿಗೆ ಮತ್ತೊಂದು ಸೇರ್ಪಡೆಯಾಗಲಿದೆ. ಸ್ಥಳೀಯ ಅಭಿವೃದ್ಧಿಗೆ ಹೊಸ ಮಾರ್ಗ ಅವಕಾಶ ಒದಗಿಸುತ್ತದೆ ಜೊತೆಗೆ. ಜ್ಞಾನದ ಕೇಂದ್ರವಾಗಿ ಮೈಸೂರಿನ ಪರಂಪರೆಯನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ವಿವರಿಸಿದ್ದಾರೆ.

ವಿಶ್ವದ ಮೊದಲ ಓರೆಯಾದ ಗುಮ್ಮಟ ತಾರಾಲಯ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆ ಯರ್ ಮಾತನಾಡಿ, ಮೈಸೂರು ವಿವಿಯ ಚಾಮುಂಡಿ ಬೆಟ್ಟದ ಕ್ಯಾಂಪಸ್‌ನಲ್ಲಿ ತಾರಾಲಯ ನಿರ್ಮಿಸಲಾಗು ತ್ತಿದ್ದು, ಇದು ವಿಶ್ವದ ಮೊದಲ ಓರೆಯಾದ ಗುಮ್ಮ ಟಾಕೃತಿಯ ಎಲ್‌ಇಡಿ ತಾರಾಲಯವಾಗಲಿದೆ. ಈ ಯೋಜನೆ ಪೂರ್ಣಗೊಂಡ ನಂತರ ಮೈಸೂರಿನ ಪ್ರಮುಖ ಪ್ರವಾಸಿ ಹಾಗೂ ಜ್ಞಾನ ಕೇಂದ್ರವಾಗಿ ಇದು ಹೊರಹೊಮ್ಮಲಿದೆ ಎಂದರು. ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವ ಮತ್ತು ದೀರ್ಘಕಾಲೀನ ಬೆಳವಣಿಗೆಗೆ ಕೊಡುಗೆ ನೀಡುವ ಯೋಜನೆಗಳನ್ನು ಜಾರಿಗೆ ತರಲು ಮುಂದಾಗಿರುವ ನಿರ್ಮಲಾ ಸೀತಾರಾಮನ್ ಅವರ ಬದ್ಧತೆ ಎಂದರು.

ಕಾಮಗಾರಿಗೆ ಭೂಮಿಪೂಜೆ



ಗುಂಡ್ಲುಪೇಟೆ: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಿಸಿರಸ್ತೆ ಚರಂಡಿ ನಿರ್ಮಾಣಕ್ಕೆ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಗುದ್ದಲಿಪೂಜೆ ನೆರವೇರಿಸಿದರು.

ತಾಲ್ಲೂಕಿನ ಮುಂಟೀಪುರ ಗ್ರಾಮದಲ್ಲಿ ಎಸ್ ಇ ಪಿ ಯೋಜನೆಯಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿರಸ್ತೆ ಚರಂಡಿ ನಿರ್ಮಾಣ, ತೆರಕಣಾಂಬಿ ಗ್ರಾಮದಲ್ಲಿ ಟಿಎಸ್ಪಿ ಯೋಜನೆ ಅಡಿಯಲ್ಲಿ 25 ಲಕ್ಷ, ಕರಕಲಮಾದಹಳ್ಳಿ ಎಸ್ಸಿಪಿ ಅಡಿಯಲ್ಲಿ25 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ವಡ್ಡನ ಹೊಸಹಳ್ಳಿ ಗ್ರಾಮದಲ್ಲಿ 25 ಲಕ್ಷ ವೆಚ್ಚದಲ್ಲಿ ಸಾಮಾನ್ಯ ವರ್ಗದ ಬೀದಿಗೆ ಸಿಸಿ ರಸ್ತೆ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ ಬಿ ರಾಜಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭು ಕರಕಲಮಾದಹಳ್ಳಿ, ಬರಗಿ ಗ್ರಾ.ಪಂ ಅಧ್ಯಕ್ಷ ಸೂರ್ಯ ಪ್ರಕಾಶ್,ಮಾಜಿ ಗ್ರಾ.ಪಂ ಅಧ್ಯಕ್ಷ ಮಹದೇವಚಾರಿ,ಗ್ರಾ.ಪಂ ಸದಸ್ಯ ಪರಮೇಶ್ ,ಮಾಜಿ ಗ್ರಾ.ಪಂ ಅಧ್ಯಕ್ಷ ಅರ್ ಡಿ ಉಲ್ಲಾಸ್ ,ಚಲುವರಾಜು,ಮತ್ತಿತರರಿದ್ದರು.

ಪ್ರತಿಯೊಬ್ಬರು ಮಹಿಳೆಯರನ್ನು ಗೌರವಿಸಿ

ಪೊಲೀಸ್ ಠಾಣೆ ಉಪನಿರೀಕ್ಷಕ ಕೆ.ಎಂ.ಮಹೇಶ್ | ಸಲಹೆ ಮಹಿಳಾ ವಿಚಾರಗೋಷ್ಠಿ

ಚಾಮರಾಜನಗರ: ಹೆಣ್ಣು ಮಕ್ಕಳ ಮೇಲೆ ನಡೆ ಯುವ ದೌರ್ಜನ್ಯ ತಡೆ ಸಂಬಂಧ ಕೇಂದ್ರಸ ರ್ಕಾರ ಪೋಕ್ಸೋ ಕಾಯ್ದೆ ಜಾರಿಗೆ ತಂದಿದ್ದು, ಕಾಯ್ದೆಯ ಬಗ್ಗೆ ಅರಿವು ಪಡೆಯ ಬೇಕು ಎಂದು ತೆರಕಣಾಂಬಿ ಪೊಲೀಸ್ ಠಾಣೆ ಉಪ ನಿರೀಕ್ಷಕ ಕೆ.ಎಂ.ಮಹೇಶ್ ಸಲಹೆ ನೀಡಿದರು.

ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ತೆರಕ ಣಾಂಬಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾ ಭಿವೃದ್ಧಿ ಯೋಜನೆ ವತಿಯಿಂದ ಈಚೆಗೆ ಆಯೋಜಿಸಿದ್ದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾ ಡಿದರು. ಈಚಿನ ದಿನಗಳಲ್ಲಿ ಮಹಿಳೆಯರು. ಮತ್ತು ಮಕ್ಕಳ ಮೇಲೆ ಆಗಿಂದಾಗ್ಗೆ ದೌರ್ಜನ್ಯ ನಡೆಯುತ್ತಿದ್ದು. ವಿಷಾಧನೀಯ, ದೌರ್ಜನ್ಯ ವೆಸಗಿದ್ದು ಸಾಬೀತಾದರೆ ಆರೋಪಿಗೆ 20 ವರ್ಷದವರಗೆ ಕಾರಾಗೃಹಶಿಕ್ಷೆ, ಜೀವಾವಧಿಶಿಕ್ಷೆ ವಿಧಿಸಬಹುದಾಗಿದೆ. ಹಾಗಾಗಿ ಪ್ರತಿಯೊಬ್ಬರು ಮಹಿಳೆಯರನ್ನು ಗೌರವಿಸಬೇಕು. ಮಕ್ಕಳನ್ನು ಸಮಾಜದ ಉತ್ತಮ ಪ್ರಜೆಗಳನ್ನಾಗಿ ರೂಪಿಸ ಬೇಕು ಎಂದರು.

ಜಿಲ್ಲಾ ನಿರ್ದೇಶಕರಾದ ದಿನೇಶ್ ಜ್ಞಾನ ವಿಕಾಸ ಜ್ಞಾನವಿಕಾಸ ಕಾರ್ಯಕ್ರಮಗಳ ಮೂಲಕ ಸದಸ್ಯರಿಗೆ ಸಿಗುವ ಅನುಕೂಲಗಳ ಬಗ್ಗೆ ಮಾಹಿತಿ ನೀಡಿದರು.ವೈದ್ಯಾಧಿಕಾರಿ ಡಾ.ಸಹನಾ ಹೆಣ್ಣು ಮಕ್ಕಳಲ್ಲಿ ಅತಿ ಹೆಚ್ಚು ಕಾಡುವ ಸ್ತನ ಕ್ಯಾನ್ಸರ್, ಗರ್ಭ ಕೋಶ ಕ್ಯಾನ್ಸರ್ , ಇದರ ನಿಯಂತ್ರಣದ ಕುರಿತು ಮಾಹಿತಿ ನೀಡಿದರು. ಪ್ರಾಂಶುಪಾಲೆ ಸವಿತ ಮಹಿಳೆಯರ ಸಬಲೀಕರಣದ ಕುರಿತು ಉಪನ್ಯಾಸ ನೀಡಿದರು. ಪ್ರಾದೇಶಿಕ ಕಚೇರಿ ಯೋಜನಾಧಿಕಾರಿ ಮೂಕಾಂಬಿಕ ಹಾಗೂ ತಾಲೂಕು ಯೋಜನಾಧಿಕಾರಿ ಶಶಿಕುಮಾರ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸ್ವ ಸಹಾಯಸಂಘದ ಸದಸ್ಯರು ಭಾಗವಹಿಸಿದ್ದರು.

ಆದಿವಾಸಿಗಳ ಅಭಿವೃದ್ದಿಗೆ ವಿವಿಧ ಯೋಜನೆ

ಚಾಮರಾಜನಗರ, ತಾಲ್ಲೂಕಿನ ಪುಣಜನೂರು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎತ್ತೇಗೌಡನದೊಡ್ಡಿ, ಶ್ರೀನಿವಾ ಸಪುರ, ಮುನೇಶ್ವರ ಕಾಲೋನಿ, ಹೊಸಪೋಡು, ಭದ್ರ ಯ್ಯನಪೋಡು, ಗೋಡೆಮಡುವಿನದೊಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ಕಾಲೋನಿಗಳಲ್ಲಿ ಎಸ್ಸಿಪಿ,ಟಿಎಸ್ಪಿ ಯೋಜನೆ ಅನುದಾನ 1.5ಕೋಟಿ ರೂ.ವೆಚ್ಚದಲ್ಲಿ ಹೈಮಾಸ್ಟ್, ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿನ ಜನರಿಗೆ ಕುಡಿಯುವ ನೀರು, ರಸ್ತೆ, ಚರಂಡಿಯಂತಹ ಮೂಲಸೌಕರ್ಯ ಕಲ್ಪಿಸುತ್ತ ಬರ ಲಾಗಿದೆ. ಇದೀಗ ಹಾಡಿಗಳ ಕಾಲೋನಿಗಳಿಗೆ ಹೈಮಾಸ್ಟ್ ಸೇರಿದಂತೆ ಸೋಲಾರ್‌ಲೈಟ್ ಅಳವಡಿಸುವ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು.

ಗ್ರಾಮಗಳ ಕಾಲನಿಗಳಿಗೆ ಅಗತ್ಯವಾಗಿ ಬೇಕಾದ ರಸ್ತೆ, ಚರಂಡಿ ಸಮುದಾಯ ಭವನ, ಕುಡಿಯುವ ನೀರು, ಗಂಗಾ ಕಲ್ಯಾಣಯೋಜನೆ, ಅರ್ಹ ಫಲಾನು ಭವಿಗಳಿಗೆ ಆಶ್ರಯ ಮನೆ, ನಿವೇಶನ, ಸೇರಿದಂತೆ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನು ಅಗತ್ಯ ಮೂಲಸೌಕರ್ಯ ಕಲ್ಪಿಸಲು ತಾವು ಬದ್ದ ಎಂದರು. ಪುಣಜನೂರು ಗ್ರಾಮಪಂಚಾಯಿತಿ ಉಪಾಧ್ಯಕ್ಷ ರಾಚಪ್ಪ, ಪಿಎಸಿಸಿ ಅಧ್ಯಕ್ಷ ಮಣ ನಾಯ್ಕ, ಮುಖಂಡರಾದ ಶಾಮೀರ್ ಪಾಷಾ, ತಾಪಂ ಮಾಜಿಸದಸ್ಯ ಕುಮಾರನಾಯಕ, ಗ್ರಾಪಂ ಮಾಜಿಅಧ್ಯಕ್ಷೆ ಶಾಂತಮ್ಮ, ಜಡೆಯಪ್ಪ, ಉಲ್ಲೇಶ್ ನಾಯಕ, ಗಣೇಶ ನಾಯಕ, ಶಂಕರ್, ಕೆಆರ್‌ಡಿಎಲ್ ಎಂಜಿನಿಯರ್ ಮಹದೇವಪ್ರಸಾದ್, ಗ್ರಾಮಸ್ಥರು ಹಾಜರಿದ್ದರು.

ಮಾಯಾವತಿ ಹುಟ್ಟು ಹಬ್ಬದ ಪ್ರಯುಕ್ತ

15ರಂದು ಪ್ರೇರಣಾ ಸಮಾವೇಶ: ಎನ್.ನಾಗಯ್ಯ

ಚಾಮರಾಜನಗರ, ಕಾಂಗ್ರೆಸ್ ಮತ್ತು ಬಿಜೆಪಿ ಎರಡು ಪಕ್ಷಗಳು ಜನರ ಬದುಕಿಗೆ ಆಸರೆಯಾಗುವ ಕಾರ್ಯಕ್ರ ಮಗಳನ್ನು ನೀಡದೆ ವಂಚಿಸುತ್ತಿವೆ ಎಂದು ಬಿ.ಎಸ್.ಪಿ ರಾಜ್ಯ ಕಾರ್ಯದರ್ಶಿ ಎನ್.ನಾಗಯ್ಯ ವಾಗ್ದಾಳಿ ನಡೆಸಿದರು.

ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಮತದಾರರಿಗೆ ಉಚಿತ ಸ್ಕೀಂಗಳ ಭರ ವಸೆ ನೀಡಿ ಮರಳು ಮಾಡಿ ಅಧಿಕಾರ ಹಿಡಿಯುತ್ತಿವೆ. ಆದರೆ ಬಹುಜನ ಸಮಾಜಪಕ್ಷ ಬಡವರ, ಶೋಷಿತರ, ಮಹಿಳಿಯರು, ರೈತರ ಮತ್ತು ಕಾರ್ಮಿಕರ ಪರ ಹೋರಾಟ ನಡೆಸಿಕೊಂಡು ಬರುತ್ತಿದೆ ಎಂದು ಹೇಳಿದರು.

ಬಿಎಸ್ ಪಿ ಮನೆ, ಮನೆಗಳಿಗೆ ತೆರಳಿ ದೇಣಿಗೆ ಸಂಗ್ರಹಿಸುತ್ತಿದ್ದು, ಜನರು ಪ್ರೀತಿಯಿಂದ ನೀಡಿದ ಹಣದಲ್ಲಿ ಪಕ್ಷವನ್ನು ಸಂಘಟನೆ ಮಾಡುಲಾಗುತ್ತದೆ ಆದರೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಬಂಡವಾಳ ಶಾಹಿಗಳು, ಉದ್ಯಮಿಗಳು ಹಾಗೂ ಬಾಂಡ್ ರೂಪದಲ್ಲಿ ಹಣ ಸಂಗ್ರಹಮಾಡುತ್ತಿದ್ದಾರೆ. ನಮ್ಮ ಮತ್ತು ಅವರ ನಡುವಿನ ವ್ಯತ್ಯಾಸವನ್ನು ಜನರು ಗಮನಿಸಿದ್ದಾರೆ. ಆಗಾಗಿಯೇ ಬಿಎಸ್ ಪಿ ರಾಜ್ಯ ಮತ್ತು ರಾಷ್ಟದಲ್ಲಿ ತನ್ನದೇ ಆದ ಅಭಿಮಾನಿಗಳ ಪಡೆ ಹೊಂದಿದೆ ಎಂದು ತಿಳಿಸಿದರು.

ಪ್ರೇರಣಾ ಸಮಾವೇಶ:

ಜ.15ರಂದು ಮೈಸೂರಿನ ಜಗನಮೋಹನ್ ಪ್ಯಾಲೇಸ್ ನಲ್ಲಿ ಬಹುಜನ ಸಮಾಜ ಪಕ್ಷದ ರಾಷ್ಟೀಯ ನಾಯಕಿ ಮಾಯಾವತಿ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಲಾಗಿರುವ ಪ್ರೇರಣಾ ಸಮಾವೇಶದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡುಗು ಜಿಲ್ಲೆಗಳಿಂದ ಸಹಸ್ರಾರು ಸಂಖ್ಯೆಯ ಜನರು ಭಾಗವಹಿಸಲಿದ್ದಾರೆ. ಈ ಸಮಾವೇಶದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಎಸ್ಪಿಯ ತಾಲೂಕು ಘಟಕದ ಅಧ್ಯಕ್ಷ ಬ.ಮ.ಕೃಷ್ಣಮೂರ್ತಿ, ಮುಖಂಡರಾದ ಬ್ಯಾಡಮೂಡ್ಲು ಬಸವಣ್ಣ, ಶಿವಶಂಕರ್, ಪುಟ್ಟಸ್ವಾಮಿ, ಶಿವಶಂಕರ್, ಬಾಲರಾಜು, ಎಸ್.ಪಿ.ಚಂದ್ರಕಾಂತ್ ಹಾಜರಿದ್ದರು.

ಅಹವಾಲು ಸ್ವೀಕಾರ

ಮಂಡ್ಯ: ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಯವರುಗಳು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸಾರ್ವಜನಿಕರಿಂದ ದೂರು/ಅಹವಾಲು ಸ್ವೀಕಾರ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆ ಸಭೆಯನ್ನು ಜನವರಿ 14 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಶ್ರೀರಂಗಪಟ್ಟಣ ತಾಲ್ಲೂಕು ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯಲ್ಲಿ ಮಂಡ್ಯ ಕರ್ನಾಟಕ ಲೋಕಾಯುಕ್ತ ಡಿವೈಎಸ್‌ಪಿ ಸುನಿಲ್ ಕುಮಾರ್ ಹೆಚ್ ಟಿ, ಪೋಲಿಸ್ ಇನ್ಸ್‌ಪೆಕ್ಟರ್‌ಗಳಾದ ರವಿಕುಮಾರ್ ಎಂ.ಲೇಪಾಕ್ಷ, ಮೂರ್ತಿ ಆರ್.ಜಿ ಬ್ಯಾಟರಾಯಗೌಡ ಬಿ ಪಿ ಅವರುಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಸಾರ್ವಜನಿಕರು ಲೋಕಾಯುಕ್ತ ಅಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳು ಸರ್ಕಾರಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಬ ಮಾಡಿದ ಬಗ್ಗೆ ಹಾಗೂ ಭ್ರಷ್ಟಾಚಾರದ ಬಗ್ಗೆ ದೂರು/ಅಹವಾಲುಗಳನ್ನು ಸಲ್ಲಿಸಬಹುದು ಎಂದು ಮಂಡ್ಯ ಕರ್ನಾಟಕ ಲೋಕಾಯುಕ್ತ ಪೋಲಿಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐ.ಎ.ಎಸ್ ಮತ್ತು ಕೆ.ಎ.ಎಸ್ ಪರೀಕ್ಷೆಗಳಿಗೆ ತರಬೇತಿ

ಮಂಡ್ಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿನಡೆಸಲು ನಿರ್ಧರಿಸಲಾಗಿದೆ.

ಆಸಕ್ತರು 2026 ರ ಜನವರಿ 17 ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವ ಪ್ರೊ. ನವೀನ್‌ಕುಮಾರ್ ಎಸ್.ಕೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಣೆಯಾದವರ ಪತ್ತೆಗಾಗಿ ಮನವಿ

ಮಂಡ್ಯ: ಮಂಡ್ಯ ತಾಲ್ಲೂಕು ಕಾರಸವಾಡಿ ಗ್ರಾಮದ ನಿವಾಸಿ ಜ್ಯೋತಿ (20 ವರ್ಷ) ಎಂಬುವವರು ಕಾಣೆಯಾಗಿದ್ದಾರೆ ಎಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾಗಿರುವ ಹೆಂಗಸು 4.5 ಅಡಿ ಎತ್ತರ, ಗೋದಿಮೈಬಣ್ಣ ಸಾಧಾರಣ ಮೈಕಟ್ಟು, ಕತ್ತಿನ ಎಡಭಾಗದಲ್ಲಿ ಕಾರಳ್ಳು ಇರುತ್ತದೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಟಾಪ್ ಮತ್ತು ಆಕಾಶ ನೀಲಿ ಬಣ್ಣದ ಪ್ಯಾಂಟ್, ಬಿಳಿ ಮತ್ತು ಆಕಾಶ್ ನೀಲಿ ಬಣ್ಣದ ಸ್ವೆಟರ್ ಧರಿಸಿರುತ್ತಾರೆ.

ಕಾಣೆಯಾಗಿರುವ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ದೂ.ಸಂ: 9480804800, 08232-224200, 9480804808 ಮತ್ತು 9480804847 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವೇಕಾನಂದರ ಆದರ್ಶ, ಚಿಂತನೆಗಳು, ಮೌಲ್ಯಗಳನ್ನು ಪ್ರತಿಯೊಬ್ಬರು ಕೂಡ ಅಳವಡಿಸಿಕೊಳ್ಳಿ: ಡಾ. ಕುಮಾರ

ಮಂಡ್ಯ: ಸ್ವಾಮಿ ವಿವೇಕಾನಂದರ ಆದರ್ಶ, ಚಿಂತನೆಗಳು, ಮೌಲ್ಯಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳುವುದರ ಮೂಲಕ ದೇಶಕ್ಕೆ ಮಾದರಿ ವ್ಯಕ್ತಿಗಳಾಗಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ಹೇಳಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಡ್ಯ ಮೈ ಭಾರತ್ ಕೇಂದ್ರ, ಮಂಡ್ಯ ವಿಶ್ವ ವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆಹಾಗೂ ಗಣಕ ವಿಜ್ಞಾನ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ದಿವ್ಯ ಚೇತನ ಸ್ವಾಮಿ ವಿವೇಕಾನಂದರ 63ನೇ ಜನ್ಮ ದಿನೋತ್ಸವದ ಅಂಗವಾಗಿ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ "ರಾಷ್ಟ್ರೀಯ ಯುವ ದಿನ"ವನ್ನು ದೀಪ ಬೆಳಗಿಸಿ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜನವರಿ 12 ವಿಶೇಷವಾದ ದಿನ, 1860 ದಶಕದಲ್ಲಿ ಭಾರತ ಮೊದಲನೇ ಮಹಾ ಯುದ್ಧದಲ್ಲಿ ಸೋತಿರುತ್ತದೆ. ಭಾರತದಲ್ಲಿ ಅಪಾರ ಸಾವು ನೋವುಗಳು ಸಂಭಾವಿಸಿರುತ್ತವೆ ಇಡೀ ದೇಶ ಕತ್ತಲೆಯಿಂದ ಕೂಡಿದ ಸಂದರ್ಭದಲ್ಲಿ ದಿವ್ಯಚೇತನರಾಗಿ ಬಂದವರು ಸ್ವಾಮಿ ವಿವೇಕಾನಂದ ಅವರು. ಒಂದು ದೇಶದಲ್ಲಿ ಪ್ರತಿ ಸಾವಿರ ವರ್ಷಗಳಿಗೆ ಒಬ್ಬರು ಮಹಾನ್ ವ್ಯಕ್ತಿ ಗಳು ಜನಿಸುತ್ತಾರೆ ಅಂತವರಲ್ಲಿ ಸ್ವಾಮಿ ವಿವೇಕಾನಂದರು ಒಬ್ಬರು ಎಂದು ಹೇಳಿದರು.

ಎಷ್ಟು ವರ್ಷ ಬದುಕಿದ್ದರೂ ಎನ್ನುವುದು ಮುಖ್ಯವಲ್ಲ ಬದುಕಿದಂತಹ ಅವದಿಯಲ್ಲಿ ಸಮಾಜಕ್ಕೆ ಅವರು ಏನು ಕೊಡುಗೆ ನೀಡಿದರು ಎನ್ನುವುದು ಮುಖ್ಯ. ಇಡೀ ವಿಶ್ವ ಭಾರತವನ್ನು ಅತ್ಯಂತ ಘನತೆ ಮತ್ತು ಗೌರವದಿಂದ ನೋಡುವಂತೆ ಮಾಡಿದವರು ಸ್ವಾಮಿ ವಿವೇಕಾನಂದರು ಎಂದು ಹೇಳಿದರು.

ಸ್ವಾಮಿ ವಿವೇಕಾನಂದರನ್ನು ವಿಶ್ವಗುರು ಎಂದು ಕರೆಯಲಾಗುತ್ತದೆ. ಭಾರತದ ಸನಾತನ ಸಂಸ್ಕೃತಿ ಯನ್ನು ವಿಶ್ವಕ್ಕೆ ಸಾರಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸ್ವಾಮಿ ವಿವೇಕಾನಂದರು ಸಂತರಾಗಿ, ಚಿಂತಕರಾಗಿ ಮತ್ತು ತತ್ವಜ್ಞಾನಿಯಾಗಿ ಭಾರತೀಯ ಸಂಸ್ಕೃತಿ ಪರಂಪರೆಗೆ ತನ್ನದೇ ಆದ ಕೊಡುಗೆಗಳನ್ನು ನೀಡಿದ್ದಾರೆ ಅವರ ಚಿಂತನೆಗಳು ಆದರ್ಶಗಳು ನಮ್ಮ ಜೊತೆ ಇಂದಿಗೂ ಜೀವಂತವಾಗಿವೆ ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರು ನಂಬಿದ್ದ ಒಂದು ಶಕ್ತಿ ಎಂದರೆ ಅದು ಭಾರತದ ಯುವ ಶಕ್ತಿ. ಯುವ ಸಮೂಹ ಸರಿ ದಾರಿಯಲ್ಲಿ ಹೋದರೆ ಮಾತ್ರ ಈ ದೇಶವನ್ನು ಸಮೃದ್ಧ ದೇಶೀಯವಾಗಿ ನಿರ್ಮಿಸಬಹುದು ಎಂಬ ಕನಸು ಕಂಡಿದ್ದರು.

1893 ಸಪ್ಟೆಂಬರ್ 11 ರಂದು ಚಿಕಾಗೋ ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾರತದ ಸಂಸ್ಕೃತಿಯ ಪರಂಪರೆಯನ್ನು ಎತ್ತಿ ಹಿಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಯುವ ಪೀಳಿಗೆ ಇತಿಹಾಸ ತಿಳಿಯಬೇಕು. 1890 ರಲ್ಲಿ ಭಾರತ ದೇಶವನ್ನು ಬಿಟ್ಟು 1893 (3ವರ್ಷ) ರವರೆಗೆ ವಿಶ್ವದ ಎಲ್ಲಾ ಸಮ್ಮೇಳನಗಳಲ್ಲಿ ಭಾಗಿಯಾಗಿ ಪ್ರವಚನಗಳನ್ನು ನೀಡಿ ಭಾರತದ ಸಂಸ್ಕೃತಿಯ ಪ್ರತಿಕವಾಗಿ ವಿಶ್ವಕ್ಕೆ ಭಾರತ ಎಂದರೆ ಏನು ಎಂದು ತಿಳಿಸಿಕೊಟ್ಟ ಮಹಾನ್ ಚೇತನ ಸ್ವಾಮಿ ವಿವೇಕಾನಂದರು ಎಂದು ಅಭಿಪ್ರಾಯಪಟ್ಟರು.

ಸ್ವಾಮಿ ವಿವೇಕಾನಂದರು ಅಮೇರಿಕಾದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಇವತ್ತಿಗೂ ಇಡೀ ವಿಶ್ವವೇ ಅವರ ಭಾಷಣವನ್ನು ಕೊಂಡಾಡಿ ಗುರುತಿಸುವಂತೆ ಮಾಡಿದ್ದಾರೆ. ನಮ್ಮ ದೇಶವನ್ನು ಹೊರ ದೇಶಗಳು ಅತ್ಯಂತ ಗೌರವ ಘನತೆಯಿಂದ ಕಾಣುವುದಕ್ಕೆ ಕಾರಣ ಅವರು ವಾಕ್ಚಾತುರ್ಯ. ಭಾರತ ದೇಶವನ್ನು ತಿಳಿದುಕೊಳ್ಳಲು ಸ್ವಾಮಿ ವಿವೇಕಾನಂದರ ಕುರಿತಾಗಿ ಓದಿ ಎಂದು ಹೇಳಿದರು.

ಯುವಕ ಯುವತಿಯರಿಗೆ ಸ್ಪಷ್ಟವಾದ ಗುರಿ, ನಂಬಿಕೆ,ಶಕ್ತಿ, ವಿಶ್ವಾಸ ಇರಬೇಕು. ದೇವರನ್ನ ನಂಬುವುದು ಮುಖ್ಯವಲ್ಲ ನಿಮ್ಮಲ್ಲಿರುವ ದೃಢತೆಯ ಮೇಲೆ ನಂಬಕೆ ಇರಬೇಕು. ಗುರಿ ಎಷ್ಟು ಮುಖ್ಯನೋ ದಾರಿಯು ಅಷ್ಟೇ ಮುಖ್ಯ. ಸಮಾಜದಲ್ಲಿ ಬುದ್ಧಿವಂತರಾಗಿ ಪ್ರಜ್ಞಾವಂತರಾಗಿ ಮತ್ತು ಹೃದಯವಂತಿಕೆಯಿಂದ ಬದುಕಬೇಕು ಎಂದು ಹೇಳಿದರು.

ಮಂಡ್ಯ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ. ಶಿವಚಿತ್ತಪ್ಪರವರು ಮಾತನಾಡಿ ಸ್ವಾಮಿ ವಿವೇಕಾನಂದರು ಯುವಜನತೆಗೆ ಸ್ಫೂರ್ತಿ. ಎಷ್ಟು ವರ್ಷ ಸೇವೆ ಸಲ್ಲಿಸುತ್ತೇವೆ ಎಷ್ಟು ವರ್ಷ ಜೀವಿಸುತ್ತೇವೆ ಎನ್ನುವುದು ಮುಖ್ಯವಲ್ಲ ನಮ್ಮ ಅವಧಿಯಲ್ಲಿ ಎಷ್ಟು ಕೆಲಸ ಕಾರ್ಯಗಳು ಆಗಿವೆ ಎನ್ನುವುದು ಮುಖ್ಯ. ಸ್ವಾಮಿ ವಿವೇಕಾನಂದ ಅವರು ರಾಮಕೃಷ್ಣ ಪರಮಹಂಸರ ಆಪ್ತ ಶಿಷ್ಯರಾಗಿದ್ದರು. ಗುರು ಶಿಷ್ಯರ ಸಂಬಂಧ ಮುಖ್ಯವಾದದ್ದು ಎಂದು ಮಾತನಾಡಿದರು

ಮಂಡ್ಯ ಆರಕ್ಷಕ ಅಧಿಕ್ಷಕರಾದ ಶೋಭಾರಾಣಿ ವಿ. ಜೆ ರವರು ಮಾತನಾಡಿ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಇತಿಹಾಸ ತಿಳಿಯದವರು ಇತಿಹಾಸವನ್ನು ಸೃಷ್ಟಿಸಲಾರರು. ಯುವ ಜನತೆ ಇತಿಹಾಸವನ್ನು ಮೊದಲು ತಿಳಿದುಕೊಳ್ಳಬೇಕು. ಮುಂದಿನ ಯುವ ಜನಾಂಗ ಸ್ವಾಮಿ ವಿವೇಕಾನಂದರ ಆದರ್ಶ, ಮೌಲ್ಯಗಳನ್ನ ತಿದುಕೊಳ್ಳಬೇಕು ಒಳ್ಳೆಯ ಆದರ್ಶ ಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಅರ್ಕೇಶ್ವರ ನಗರದ ಬಾಲಕಿಯರ ಸರ್ಕಾರಿ ಪದವ ಪೂರ್ವ ಕಾಲೇಜಿನ ಡಾ.ಮನು ಗೊರವಾಲೆ ಅವರು ಮಾತನಾಡಿ ಆಧುನಿಕ ಜಗತ್ತಿನಲ್ಲಿ ಯುವರಾಷ್ಟ ಎಂದು ಕರೆಸಿಕೊಳ್ಳುವ ಏಕೈಕ ದೇಶ ಭಾರತ ಮಾತ್ರ. ಭಾರತದಲ್ಲಿರುವ ಯುವಕರ ಸಂಖ್ಯೆ ಪಾಶ್ಚಿಮಾತ್ಯ 5 ರಿಂದ 6 ದೇಶಗಳ ಜನಸಂಖ್ಯೆಯಾಗಿದೆ ಹಾಗಾಗಿ ಭಾರತದ ಯುವ ಸಮೂಹವನ್ನು ಒಳಗೊಂಡಿದೆ. ಪ್ರಸ್ತುತ ಯುವಕರು ಸ್ವಾಮಿ ವಿವೇಕಾನಂದ ಅವರ ಕುರಿತಾಗಿ ಹೆಚ್ಚು ತಿಳಿದುಕೊಳ್ಳಬೇಕು. ಅವರ ಆದರ್ಶ ಮತ್ತು ಮೌಲ್ಯಗಳ ಪಾಲನೆ ಮಾಡುವ ನಿಟ್ಟಿನಲ್ಲಿ ಕಾರ್ಯನಿರತರಾಗಬೇಕು ಎಂದು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಮೂಡ ಆಯುಕ್ತರು ಹಾಗೂ ಮಂಡ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ ಕೃಷ್ಣಕುಮಾರ್, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಸಂಯೋಜಕರಾದ ಡಾ. ಪ್ರಮೀಳಾ ಎಂ.ಬಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಓಂಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉಪ್ಪಾರ ಸಮಾಜದ ಪ್ರಗತಿಗೆ ಶಿಕ್ಷಣವೇ ಆಸ್ತಿ

ಮೈಸೂರು: ಉಪ್ಪಾರ ಸಮಾಜದ ಪ್ರಗತಿಗೆ ಶಿಕ್ಷಣವೇ ಆಸ್ತಿ ಎಂದು ಚಾಮರಾಜನಗರ ಶಾಸಕರು ಹಾಗೂ ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ಅವರು ನಗರದ ಗೋವರ್ಧನ್ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ಸಾಧಕರು, ಸಮಾಜ ಸೇವಕರಿಗೆ ಸನ್ಮಾನ ಹಾಗೂ ಸಂಘದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮುದಾಯದವರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸುವಂತಹ ಕೆಲಸವನ್ನು ಮಾಡಬೇಕು. ನಮ್ಮಲ್ಲಿರುವ ಹಿಂಜರಿಕೆ, ಮೂಡನಂಬಿಕೆಗಳನ್ನು ದೂರಮಾಡಬೇಕು. ಇವುಗಳ ಬಗ್ಗೆ ಸಮಾಜದವರಲ್ಲಿ ಅರಿವು ಮೂಡಿಸುವಂತಹ ಕೆಲಸವನ್ನು ಸಂಘಟನೆಗಳು ಮಾಡಬೇಕು. ಉಪ್ಪಾರ ಸಮುದಾಯದವರಲ್ಲಿ ಅತಿಹೆಚ್ಚಿನ ಆಚಾರ, ವಿಚಾರಗಳಿವೆ ಹಾಗೂ ಹಬ್ಬಗಳನ್ನು ಆಚರಣೆ ಮಾಡಲಾಗುತ್ತಿದೆ. ಸಾಧ್ಯವಾದಷ್ಟು ಇವುಗಳನ್ನು ಕಡಿಮೆ ಮಾಡಿ ಅಗತ್ಯಕ್ಕೆ ತಕ್ಕಂತೆ ಕಾರ್ಯವನ್ನು ಮಾಡುವ ಮೂಲಕ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬೇಕು ಎಂದರು. ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಹೆಚ್ಚಿನ ಗಮನಹರಿಸುವ ಕೆಲಸ ಮಾಡುವುದರೊಂದಿಗೆ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸಿ ಸುಸಂಸ್ಕೃತ ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಕರೆ ನೀಡಿದರು.

ಉಪ್ಪಾರ ಸಮುದಾಯದವರು ಸಂಘಟಿತರಾಗುವುದರಿಂದ ಸಮುದಾಯ ಅಭಿವೃದ್ಧಿಯಾಗಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಸಮಾಜದ ಎಲ್ಲರೂ ಕೂಡ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಒಟ್ಟಾಗಿ ಸೇರಿಕೊಂಡು ಸಮುದಾಯದ ಸಂಘಟನೆಗಳನ್ನು ಗಟ್ಟಿಯಾಗಿ ಎಲ್ಲೆಡೆ ಕಟ್ಟುವಂತಹ ಕೆಲಸ ಮಾಡಬೇಕು ಆ ಮೂಲಕ ನಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಉಪ್ಪಾರ ಸಮುದಾಯಕ್ಕೆ ಎಸ್ ಸಿ ಅಥವಾ ಎಸ್ ಟಿ ಮೀಸಲಾತಿ ದೊರಕಿಸಲು ಪ್ರಯತ್ನ ಮಾಡಲಾಗುತ್ತಿದೆ. ಮೈಸೂರು ಚಾಮರಾಜನಗರ ಬಿಟ್ಟರೆ ಹಲವು ಕಡೆ ನಮ್ಮವರ ಸ್ಥಿತಿ ಶೋಚನೀಯವಾಗಿದೆ. ಯಾವುದೇ ಪ್ರಬಲ ಧ್ವನಿಯು ನಮಗಿಲ್ಲ. ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿ ಸಮಾಜದ ಬೇಡಿಕೆಯನ್ನು ಈಡೇರಿಸುವಂತೆ ಮನವಿ ಮಾಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಸಮುದಾಯದ ಸಾಧಕರು, ಸಮಾಜ ಸೇವಕರು, ನಿವೃತ್ತ ನೌಕರರು, ಅಧಿಕಾರಿಗಳು ಹಾಗೂ ಸಂಘಟನೆಗಳ ಪ್ರಮುಖರನ್ನು ಸನ್ಮಾನಿಸಿ, ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಗೀರಥ ಪೀಠದ ಡಾ.ಪುರುಷೋತ್ತಮಾನಂದ ಪುರಿ ಸ್ವಾಮೀಜಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಲಕ್ಷ್ಮಣ ಉಪ್ಪಾರ, ಮುಡಾ ಮಾಜಿ ಅಧ್ಯಕ್ಷ ಎಚ್.ಎನ್.ವಿಜಯ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಯು. ವೆಂಕೋಬ, ಸಂಘದ ಅಧ್ಯಕ್ಷ ಕರಳಪುರ ನಾಗರಾಜು, ರಾಜ್ಯ ಉಪ್ಪಾರ ಯುವ ವೇದಿಕೆಯ ಮಾಜಿ ಜಿಲ್ಲಾಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಕೆಎಂಎಫ್ ನಿರ್ದೇಶಕಿ ಶೀಲಾ ಪುಟ್ಟರಂಗಶೆಟ್ಟಿ,

ಜಿ.ಪಂ. ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಮಾಜಿಸದಸ್ಯ ಕೆ.ಬಿ.ಸ್ವಾಮಿ,ಮುಖಂಡರುಗಳಾದ ಪಿ.ಎಸ್.ವಿಷಕಂಠಯ್ಯಇದ್ದರು.

ಅಧ್ಯಾಪನ ಮತ್ತು ಅಧ್ಯಯನ ಸಂಶೋಧನೆಗೆ ಬಹಳ ಮುಖ್ಯ: ಪ್ರೊ.ಕೆ.ಶಿವಚಿತ್ತಪ್ಪ

ಮಂಡ್ಯ: ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವುದೆ ಸಂಶೋಧನೆ ಹಾಗಾಗಿ ಅಧ್ಯಾಪನ ಮತ್ತು ಅಧ್ಯಯನ ಸಂಶೋಧನೆಗೆ ಬಹಳ ಮುಖ್ಯವಾಗಿದೆ ಎಂದು ಮಂಡ್ಯ ವಿಶ್ವವಿದ್ಯಾಲಯ ಉಪ ಕುಲಪತಿಗಳಾದ ಪ್ರೊ.ಕೆ. ಶಿವಚಿತ್ತಪ್ಪ ಅವರು ಹೇಳಿದರು.

ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಸ್ನಾತಕ, ಸ್ನಾತಕೋತ್ತರ ಕನ್ನಡ ವಿಭಾಗ ಮತ್ತು ಸಂಶೋಧನಾ ಕೇಂದ್ರ ರೂಸಾ 2.0 ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ "ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು ಮತ್ತು ಸವಾಲುಗಳ" ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗುರುವು ಎಂದರೆ ಗುಹೆಯಲ್ಲಿರುವ ಅಂಧಕಾರವನ್ನ ಹೋಗಲಾಡಿಸುವವನೆ ಗುರು. ಅಜ್ಞಾನದಿಂದ ಜ್ಞಾನದ ಬೆಳಕು ಚೆಲ್ಲುವವನು ಎಂದು ಅರ್ಥೈಸಿಕೊಳ್ಳಬಹುದು. ಹಾಗೆಯೇ ಎಲ್ಲೋ ಇರುವ ಸತ್ಯವನ್ನು ಹೊರ ತೆಗೆಯುವುದೆ ಸಂಶೋಧನೆ. ಸಾಮಾಜಿಕ ವಿಜ್ಞಾನದ ಸಂಶೋಧನೆಗೂ ಕನ್ನಡ ಸಾಹಿತ್ಯದ ಸಂಶೋಧನೆಗೆ ಬಹಳ ವ್ಯತ್ಯಾಸವಿದೆ ಆದರೆ ಅಂತಿಮ ಗುರಿ ಸಂಶೋಧನೆ ಎಂದು ಹೇಳಿದರು.

ಈಗಾಗಲೇ ಹಲವಾರು ಜ್ಞಾನಿಗಳು ವಿಜ್ಞಾನಿಗಳ ಶೋಧನೆ ಮಾಡಿರುವ ವಿಷಯದ ಕುರಿತು ಅಧ್ಯಯನ ಮಾಡುವುದೇ ಸಂಶೋಧನೆ ಅಸ್ಥಿತ್ವದಲ್ಲಿರುವ ಜ್ಞಾನದ ಹೊಸತನವನ್ನು ಹುಡುಕುವುದು ಎಂದು ಅರ್ಥೈಸಿಕೊಳ್ಳಬಹುದು. ಸಂಶೋಧನೆಯಲ್ಲಿ ಪ್ರಶ್ನೆಗಳಿಲ್ಲದೆ ಉತ್ತರ ಹುಡುಕುವುದು ಸಾಧ್ಯವಿಲ್ಲ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಮಾತ್ರ ಯಾವ ವಿಷಯದ ಮೇಲೆ ಸಂಶೋಧನೆ ಮಾಡಬಹುದು ಎಂದು ತಿಳಿಯುತ್ತದೆ ಎಂದು ಹೇಳಿದರು.

ಯಾವುದೇ ವಿಷಯವಾಗಲಿ ವಿಷಯವನ್ನು ಅವಲೋಕಿಸದೆ ಸೂಕ್ತ ಸಂಶೋಧನಾ ವಿಷಯ ದೊರೆಯುವುದಿಲ್ಲ. ಕನ್ನಡ ಸಾಹಿತ್ಯ ಸಂಶೋಧನೆ ಮಾಡುವಲ್ಲಿ ಸಾಹಿತ್ಯಗಳ ಜವಾಬ್ದಾರಿ ದೊಡ್ಡದಿದೆ. ಮಂಡ್ಯ ವಿಶ್ವವಿದ್ಯಾಲಯದಲ್ಲಿ ಹೆಚ್ಚು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಕೆಲಸವಾಗಬೇಕಿದೆ. ಈಗಾಗಲೇ 5 ಸಂಶೋಧನೆ ಕೇಂದ್ರಗಳನ್ನು ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ. ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ಬೇರೆಲ್ಲೋ ಹೋಗಿ ಸಂಶೋಧನೆ ಮಾಡುವ ಬದಲು ಇಲ್ಲಿಯೇ ಸಂಶೋಧನೆ ಮಾಡಬೇಕು ಎಂಬ ಉದ್ದೇಶದಿಂದ ಇಷ್ಟೆಲ್ಲಾ ಮಾಡಲಾಗುತ್ತಿದೆ ಎಂದರು.

ಸಂಶೋಧನೆ ಯಾವಾಗಲೂ ಸಕಾರಾತ್ಮಕವಾಗಿರಲಿ. ಸಮಾಜಕ್ಕೆ ಸಂಶೋಧಕರ ಅಗತ್ಯವಿದೆ. ನೀವು ಮಾಡುವ ಸಂಶೋಧನೆ ಯಾವಾಗಲೂ ಗುಣಮಟ್ಟದಿಂದ ಕೂಡಿರಲಿ ಎಂದು ಹೇಳಿದರು.

ಮಹಿಳಾ ಸರ್ಕಾರಿ ಕಾಲೇಜಿನ (ಸ್ವಾಯತ್ತ) ಪ್ರಾಂಶುಪಾಲರಾದ ಪ್ರೊ. ಗುರುರಾಜ್ ಪ್ರಭು ಕೆ ಅವರು ಮಾತನಾಡಿ ಸಂಶೋಧಕರಿಗೂ ಹಾಗೂ ಅಧ್ಯಾಪಕರಿಗೆ ಇಂತಹ ಕಾರ್ಯಕ್ರಮಗಳು ಅತಿ ಮುಖ್ಯವಾಗಿದೆ. ಸಂಶೋಧನೆ ಮನುಷ್ಯ ಮತ್ತು ವಸ್ತು ವಿಷಯಗಳ ನಡುವಿನ ನಿರಂತರವಾದ ಪ್ರಕ್ರಿಯೆ. ಸಂಶೋಧನೆ ಪ್ರತಿ ತಲೆಮಾರಿಗೂ ಅಗತ್ಯವಾಗಿದೆ ಎಂದು ಹೇಳಿದರು.

ಕೌಶಲ್ಯ ತರಬೇತಿ ಅರ್ಜಿ ಆಹ್ವಾನ

ತುಮಕೂರು: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ,ಜಿಲ್ಲಾಕೈಗಾರಿಕಾ ಕೇಂದ್ರಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)ದ ಸಂಯುಕ್ತಾಶ್ರಯದಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸ ಬಯಸುವ ಜಿಲ್ಲೆಯ ಯುವನಿಧಿ ಫಲಾನುಭವಿಗಳಿಗೆ ಉಚಿತ 4 ವಾರಗಳ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯನ್ನು ನಗರದ ಬಿ.ಹೆಚ್. ರಸ್ತೆಯಲ್ಲಿನ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಆಯೋಜಿಸಲಾಗಿದ್ದು, ಬ್ಯೂಟಿ ಪಾರ್ಲರ್, ದ್ವಿಚಕ್ರ ವಾಹನ ಸೇವೆ, ಡೆಸ್ಕ್‌ಟಾಪ್ ಪಬ್ಲಿಷಿಂಗ್ ತರಬೇತಿ, ಬೇಕರಿ ಉತ್ಪನ್ನದ ತಯಾರಿಕೆ, ವಿದ್ಯುತ್ ಮತ್ತು ಗೃಹೋಪಯೋಗಿ ಉಪಕರಣಗಳು, ಆಹಾರ ಮತ್ತು ಕೃಷಿ ಆಧಾರಿತ ತರಬೇತಿ ನೀಡಲಾಗುವುದು.

ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮ, ಸರ್ಕಾರದ ಸ್ವಂತ ಉದ್ಯೋಗ ಯೋಜನೆ, ಉದ್ಯಮ ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ ಹಾಗೂ ಉದ್ಯಮ ನಿರ್ವಹಣೆ, ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಜಂಟಿ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ರಿಸರ್ವ್ ಪೊಲೀಸ್ ಮೈದಾನದ ಎದುರು, ಎಸ್.ಐ.ಟಿ. ಬಸ್ ನಿಲ್ದಾಣ, ತುಮಕೂರು ಕಚೇರಿಯಿಂದ ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ ಅಥವಾ ದೂ.ವಾ.ಸಂ. 7022746755, https://forms.gle/AmLGJky6amd158KD6. ಮೂಲಕವೂ ಸಹ ಜನವರಿ 20ರೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ಕೃಷಿ ಜತೆಗೆ ಸ್ವಯಂ ಉದ್ಯೋಗಗಳನ್ನು ಕಂಡುಕೊಳ್ಳಿ: ಜಿಟಿಡಿ

ಮೈಸೂರು: ಕೃಷಿ ಜೊತೆಗೆ, ಗುಡಿ ಕೈಗಾರಿಕೆ,ಸಣ್ಣ ಕೈಗಾರಿಕೆ,ಹೈನುಗಾರಿಕೆ ಸೇರಿದಂತೆ ಸ್ವಂತ ಉದ್ಯೋಗಗಳನ್ನು ಕಂಡುಕೊಳ್ಳಬೇಕು. ದೇಶ ಸಮೃದ್ಧ,ಆರ್ಥಿಕವಾಗಿ ಇರಲು ಮಹಿಳೆಯರು ಆರ್ಥಿಕತೆಯಿಂದ ಇರಬೇಕು. ಮಹಿಳಾ ಸ್ತ್ರೀಶಕ್ತಿ ಸಂಘಗಳು ಉಳಿತಾಯ ಮಾಡಿ ಬೇರೆಯವರಿಗೂ ಶಕ್ತಿ ತುಂಬಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಮೈಸೂರು ತಾಲ್ಲೂಕಿನ ನಾಗನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಕಳಸ್ತವಾಡಿ ವಲಯದ ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆ ದೂರದೃಷ್ಟಿಯನ್ನು ಯೋಚಿಸಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಸುಖ,ಆರೋಗ್ಯ,ಸಂತೋಷವನ್ನು ಕೊಡಲೆಂದು ಪ್ರಾರ್ಥಿಸಬೇಕಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುಜ್ಞಾನನಿಧಿಯನ್ನು ಶುರು ಮಾಡಲಾಯಿತು. ಹನ್ನೆರಡು ತಿಂಗಳ ಕಾಲ ಉನ್ನತ ಶಿಕ್ಷಣ ಸಚಿವರಾಗಿದ್ದಾಗ ನನ್ನನ್ನೇ ಕರೆದು ಯೋಜನೆಗೆ ಚಾಲನೆ ಕೊಡಿಸಿದ್ದರು. ಸುಜ್ಞಾನನಿಧಿಯಿಂದ ಸಾವಿರಾರು ಗ್ರಾಮೀಣ ಪ್ರದೇಶದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ ಎಂದರು. ಸಮಾಜ ಬದಲಾವಣೆಯಾದಂತೆ ಹಲವಾರು ರಂಗಗಳಲ್ಲಿ ಮಹಿಳೆಯರು ಗುರುತಿಸಿಕೊಂಡು ತಮ್ಮ ಕಾಲಿನ ಮೇಲೆ ನಿಲ್ಲುತ್ತಿದ್ದಾರೆ. ಮಹಿಳೆಯರು ಅಬಲೆಯರು ಅಲ್ಲ, ಸಬಲೆಯರು ಎನ್ನುವುದನ್ನು ಸಾಬೀತುಪಡಿಸಿದ್ದಾರೆ.ಸಮೃದ್ಧ ದೇಶ ಕಾಣಬೇಕಾದರೆ ಪ್ರತಿಯೊಬ್ಬರೂ ಆರ್ಥಿಕವಾಗಿ ಗಟ್ಟಿಯಾಗಿರಬೇಕು ಎಂದರು.

ಸಿದ್ದಲಿಂಗಪುರ, ನಾಗನಹಳ್ಳಿ ಭಾಗದಲ್ಲಿ ಜಮೀನು ಉಳಿಸಿಕೊಂಡು ಕೃಷಿ ಮಾಡಲಾಗುತ್ತಿದೆ. ಪಡುವ ಾರಹಳ್ಳಿ,ಕುಂಬಾರಕೊಪ್ಪಲು,ಕನ್ನೇಗೌಡನಕೊಪ್ಪಲು ,ಮಂಚೇಗೌಡನ ಕೊಪ್ಪಲಿನ ರೈತರು ಅಂದು 5 ಲಕ್ಷಕ್ಕೂಕಡಿಮೆ ದರಕ್ಕೆ ಮಾರಿಕೊಂಡರು. ಈಗ ಅದೇ ಜನರು ತಮ್ಮ ಮಕ್ಕಳು,ಮೊಮ್ಮಕ್ಕಳಿಗೆ ಈಗ ಒಂದು ನಿವೇಶನ ಇಲ್ಲದೆ ಪರದಾಡುತ್ತಿದ್ದಾರೆ. ಕೋಟಿ ಕೊಟ್ಟರೂ ಭೂಮಿ ಸಿಗುತ್ತಿಲ್ಲ ಎಂದು ಬೇಸರಿಸಿದರು. ಕೃಷಿಭೂಮಿ ಮಾರಾಟ ಮಾಡಿ ಅದ್ದೂರಿ ಮದುವೆ ಮಾಡಬಾರದು.

ಅದೇ ಜಮೀನನ್ನು ತಮ್ಮ ಮಕ್ಕಳಿಗೆ ನೋಂದಣಿ ಮಾಡಿ ಆಸ್ತಿ ಮಾಡಬೇಕು. ಅದೇ ರೀತಿ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಸಂಸ್ಕಾರಯುತ ಶಿಕ್ಷಣ ಕೊಡುವ ಕೆಲಸ ಮಾಡಬೇಕು ಎಂದರು.

ಸಾನ್ನಿಧ್ಯವನ್ನು ಶ್ರೀ ತ್ರಿನೇತ್ರಮಹಾಂತಸ್ವಾಮೀಜಿ ವಹಿಸಿದ್ದರು. ಅಧ್ಯಕ್ಷತೆಯನ್ನು ಸತ್ಯನಾರಾಯಣ ಪೂಜಾ ಸಮಿತಿ ಅಧ್ಯಕ್ಷೆ ಸಿ.ರೂಪ ತುಳಸಿರಾಮ್ ವಹಿಸಿದ್ದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಜಂಟಿ ನಿರ್ದೇಶಕ ವಿ.ವಿಜಯಕುಮ್ ನಾಗನಾಳ,ಡಾ.ಎಂ.ಎಸ್.ಶ್ವೇತಾ ಜಗದೀಶ್, ಜಿಪಂ ಮಾಜಿ ಸದಸ್ಯ ಎಸ್.ದಿನೇಶ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಡಿ.ರಾಮಚಂದ್ರ,ಎಸ್‌ಡಿಎಂಸಿ ಅಧ್ಯಕ್ಷ ಎನ್.ಎಸ್.ನಾರಾಯಣ, ಮಹದೇವಪ್ಪ, ಶಂಕರ್, ಜವರೇಗೌಡ, ರೂಪಕಲಾ, ಶಶಿರೇಖಾ, ರಾಧಾಸೋಮಶೇಖರ್,ದಿವ್ಯ, ಕವಿತಾ ಸಂತೋಷ್, ಸುನಿತಾ ಮತ್ತಿತರರು ಹಾಜರಿದ್ದರು.

ವಿಶೇಷ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ

ಮಂಡ್ಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಕುರಿತು ಯೋಜಿಸಲಾಗಿದ್ದ "ಛಾಯಾಚಿತ್ರ ಪ್ರದರ್ಶನ" ಕಾರ್ಯಕ್ರಮಕ್ಕೆ ಮಳವಳ್ಳಿ ತಹಶೀಲ್ದಾರ್ ಲೋಕೇಶ್ ಅವರು ಚಾಲನೆ ನೀಡಿದರು.

ಮಳವಳ್ಳಿ ಬಸ್ ನಿಲ್ದಾಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ನಿರ್ಮಿಸಲಾಗಿದ್ದ ಪಂಚ ಗ್ಯಾರಂಟಿ ಯೋಜನೆಗಳು ಹಾಗೂ ಎಸ್.ಸಿ.ಪಿ ಯೋಜನೆಯ ಅರಿವು ಮತ್ತು ಜಾಗೃತಿ ಮೂಡಿಸುವ ಮಳವಳ್ಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ವಿಶೇಷ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ರಾಜ್ಯ ಸರ್ಕಾರ ಸಾರ್ವಜನಿಕರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿದೆ. ಸರ್ಕಾರಿ ಯೋಜನೆಗಳ ಕುರಿತಾಗಿ ಸಾರ್ವಜನಿಕರಿಗೆ ತಿಳಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಶ್ರಮಿಸುತ್ತಿದೆ. ರಾಜ್ಯ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆ ಸಮರ್ಪಕವಾಗಿ ಸದುಪಯೋಗವಾಗುತ್ತಿದೆ. ಸರ್ಕಾರಿ ಯೋಜನೆಗಳು ಅರ್ಹರನ್ನು ತಲುಪಬೇಕು. ಮಳವಳ್ಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಸರಕಾರದ ವಿವಿಧ ಯೋಜನೆಗಳ ಕುರಿತು ಛಾಯಾಚಿತ್ರಗಳು ಸಮೇತ ಮಾಹಿತಿ ಇರುವ ಪ್ರದರ್ಶನ ಕಂಡು ಕಣ್ತುಂಬಿಕೊಳ್ಳಬಹುದಾಗಿದೆ ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಟಿ.ಕೆ ಹರೀಶ್ ಅವರು ಮಾತನಾಡಿ ಕರ್ನಾಟಕದ ಗ್ಯಾರಂಟಿ ಯೋಜನೆಗಳ ಕುರಿತು ಜನರಿಗೆ ಅರಿವು ಮೂಡಿಸಲು, ಛಾಯಾಚಿತ್ರ ಪ್ರದರ್ಶನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲಾಗಿದ್ದು ಈ ಪ್ರದರ್ಶನಗಳು 'ಶಕ್ತಿ', 'ಗೃಹ ಜ್ಯೋತಿ', 'ಗೃಹ ಲಕ್ಷ್ಮಿ', 'ಅನ್ನಭಾಗ್ಯ' ಮತ್ತು 'ಯುವ ನಿಧಿ' ಯೋಜನೆಗಳ ಅನುಷ್ಠಾನ ಮತ್ತು ಪ್ರಯೋಜನಗಳನ್ನು ಜನರಿಗೆ ತಿಳಿಸಿಕೊಡುವ ಗುರಿಯನ್ನು ಹೊಂದಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಳವಳ್ಳಿ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಾಶ್ ಹಾಗೂ ಕೆ.ಎಸ್.ಆರ್.ಟಿ.ಸಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಜನರ ಗಮನ ಸೆಳೆದ ಛಾಯಾಚಿತ್ರಗಳು

ಮಳವಳ್ಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ವಿಶೇಷ ಛಾಯಾಚಿತ್ರಗಳ ಪ್ರದರ್ಶನ ಸಾರ್ವಜನಿಕ ಗಮನ ಸೆಳೆಯಿತು.

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಪ್ರತಿಮೆಯ ಎದುರು ಹಾಗೂ ವಿವಿಧ ಛಾಯಾಚಿತ್ರಗಳು ಮುಂದೆ ನಿಂತು ಸಾರ್ವಜನಿಕರು ಸೆಲ್ಫಿ ಕ್ಲಿಕ್ಕಸಿದರು.

ಮೀಸಲಾತಿ ಚರ್ಚೆಗಳು ರಾಜಕೀಯವಾಗಿ ದುರುಪಯೋಗ ಆಗುತ್ತಿವೆ

ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕ ಸಚಿವ ಎಚ್.ಡಿ.ಕುಮಾರಸ್ವಾಮಿ ಬೇಸರ

ಕೆ.ಆರ್. ನಗರ : ಮೀಸಲಾತಿಯ ಚರ್ಚೆಗಳು ಪ್ರಸ್ತುತ ಸಮಾಜದಲ್ಲಿ ಹೆಚ್ಚಾಗಿ ನಡೆಯುತ್ತಿದ್ದು ಇದರಿಂದ ಎಷ್ಟರ ಮಟ್ಟಿಗೆ ಆ ಸಮಾಜಗಳಿಗೆ ಶಕ್ತಿ ಸಿಗುವುದರ ಬದಲಾಗಿ ರಾಜಕೀಯವಾಗಿ ದುರುಪಯೋಗ ಆಗುತ್ತಿವೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕ ಸಚಿವ ಎಚ್.ಡಿ.ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಅಖಿಲ ನಾಮದಾರಿ ಗೌಡ ಸಮುದಾಯ ಭವನದಲ್ಲಿ ತಾಲೂಕು ನಾಮಧಾರಿಗೌಡ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಸಮುದಾಯ ಭವನಕ್ಕೆ 25 ವರ್ಷಗಳ ಬೆಳ್ಳಿ ಹಬ್ಬದ ಸಂಭ್ರಮ ಆಚರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಅತಿ ಸೂಕ್ಷ್ಮ ಸಮಾಜಗಳನ್ನು ಗುರುತಿಸುವುದು ನಮ್ಮಗಳ ಕರ್ತವ್ಯ ಎಂದರು.

ರಾಜ್ಯದಲ್ಲಿ ನಾಮಧಾರಿ ಸಮುದಾಯ ಕಡಿಮೆ ಸಂಖ್ಯೆಯಲ್ಲಿದ್ದು ಸಮಾಜವನ್ನು ದೊಡ್ಡಮಟ್ಟದಲ್ಲಿ ಗುರುತಿಸಿ ರಾಜಕೀಯ ಸ್ಥಾನಮಾನಗಳನ್ನು ನೀಡಿಲ್ಲ ಎಂಬ ನೋವು ಸಮುದಾಯಕ್ಕೆ ಇದೆ. ಮುಂದಿನ ದಿನಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಿ ಪ್ರಾಮಾಣಿಕವಾಗಿ ಸರಿಪಡಿಸುತ್ತೇನೆ. ಅಲ್ಲದ ಸಮಾಜವನ್ನು ಓಬಿಸಿ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರದಿಂದ ಶಿಫಾರಸ್ಸು ಬಂದರೆ ಕೂಡಲೇ ನಾನು ಪ್ರಧಾನಮಂತ್ರಿಗಳೊಂದಿಗೆ ಹಾಗೂ ಸಂಬಂಧಪಟ್ಟ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುತ್ತೇನೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಧ್ವನಿ ಇಲ್ಲದ ಸಮಾಜಕ್ಕೆ ಧ್ವನಿಯಾಗಿ ಬೆನ್ನೆಲುಬಾಗಿ ಜೆಡಿಎಸ್ ಪಕ್ಷ ಸದಾ ನಿಂತಿದೆ, ಹಾಗಾಗಿ ಉಪ್ಪಾರ ಸಮಾಜ ಮುಖಂಡರೊಬ್ಬರನ್ನು ವಿಧಾನ ಪರಿಷತ್ ಸದಸ್ಯರಾಗಿ ಮಾಡಿ ರಾಜಕೀಯವಾಗಿ ಸ್ಥಾನಮಾನ ನೀಡಿದ್ದೇವೆ ಎಂದು ಸ್ಮರಿಸಿದರು.

ಕೆಲವರು ಹಿಂದುಳಿದ ವರ್ಗದ ನಾಯಕರು ಎಂದು ಬೋರ್ಡ್ ಹಾಕಿಕೊಳ್ಳುತ್ತಾರೆ ಆದರೆ ಅವರು ಎಷ್ಟು ಹಿಂದುಳಿದ ವರ್ಗದ ನಾಯಕರನ್ನು ಬೆಳೆಸಿದ್ದಾರೆ. ಆ ಸಮುದಾಯಕ್ಕೆ ಸಾಮಾಜಿಕ ನ್ಯಾಯ ನೀಡಿದ್ದಾರೆ ಎಂದು ಪ್ರಶ್ನಿಸಿದ ಕೇಂದ್ರ ಸಚಿವರು ಸಮುದಾಯಕ್ಕೆ ಸಿಎ ನಿವೇಶನ ದೊರಕಿಸಿದರೆ ಹಾಗೂ ಸಮುದಾಯ ಭವನದ ಜೀರ್ಣೋದ್ಧಾರ ಕಾರ್ಯ ಮಾಡುವ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರ ಮೂಲಕ ಹೆಚ್ಚಿನ ಅನುದಾನ ಕೊಡಿಸುತ್ತೇನೆ ಎಂದರು.

ಶಾಸಕ ಡಿ.ರವಿಶಂಕರ್ ಮಾತನಾಡಿ ನಾಮಧಾರಿಗೌಡ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಲು ನೀವುಗಳು ನಮಗೆ ಮನವಿ ಸಲ್ಲಿಸಿದ್ದು ಈ ಬಗ್ಗೆ ನಾನು ಸಂಬಂಧಪಟ್ಟ ಸಚಿವರು ಹಾಗೂ ನಮ್ಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರಿಗೆ ಚರ್ಚಿಸಿ ಕೇಂದ್ರಕ್ಕೆ ಶಿಫಾರಸು ಮಾಡಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು.

ಹಾಸನ ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಕಳೆದ ಅವಧಿಯಲ್ಲಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಭೂಮಿ ಪೂಜೆ ನೆರವೇರಿಸಿದ್ದರು ಈ ರಸ್ತೆ ಗುಂಡಿ ಬಿದ್ದು ಸಂಚಾರಕ್ಕೆ ಅನಾನುಕೂಲವಾಗಿರುವುದರಿಂದ ತಾವುಗಳು ಈ ಬಗ್ಗೆ ಹೆಚ್ಚಿನ ಗಮನಹರಿಸಿ ಸಂಬಂಧಪಟ್ಟ ಕೇಂದ್ರ ಸಚಿವರ ಗಮನಕ್ಕೆ ತಂದು ಶೀಘ್ರವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಮಾಡಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಂದ್ರ ಸಚಿವಎಚ್.ಡಿ.ಕುಮಾರಸ್ವಾಮಿಯವರಲ್ಲಿ ಮನವಿ ಮಾಡಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ ನಿಮ್ಮೆಲ್ಲರ ಸಹಕಾರದಿಂದ 15 ವರ್ಷ ಶಾಸಕನಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ನಿಮ್ಮ ಸಮುದಾಯಕ್ಕೆ ಸಾಂವಿಧಾನಿಕ ಹುದ್ದೆ ಕೊಡುತ್ತೇವೆ. ಸಮುದಾಯದವರು ನಿವೇಶನ ಕೊಟ್ಟರೆ 1ಕೋಟಿ ರೂಪಾಯಿಗಳ ಅನುದಾನವನ್ನು ಶೈಕ್ಷಣಿಕ ಸಂಸ್ಥೆಗೆ ಕೊಡುತ್ತೇನೆ. ಅಲ್ಲದೆ ರಾಜ್ಯ ಸರ್ಕಾರ ನಾಮಧಾರಿಗೌಡ ಸಮುದಾಯವನ್ನು ಒಬಿಸಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿದರೆ ಕೇಂದ್ರ ಸರ್ಕಾರದಿಂದ ನಾವು ಮಾತನಾಡಿ ಅದನ್ನು ಮಾಡಿಸಿಕೊಂಡು ಬರುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಸಮುದಾಯದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು, ನಿವೃತ್ತ ಯೋಧರು ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಿದ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್, ಸಿ.ಎನ್. ಮಂಜೇಗೌಡ, ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ , ಮಾಜಿ ಶಾಸಕ ಅಶ್ವಿನ್ ಕುಮಾರ್, ತಾಲೂಕು ಅಖಿಲ ನಾಮಧಾರಿಗೌಡ ಸಂಘದ ಅಧ್ಯಕ್ಷ ಕೆ.ಆರ್.ಅಶೋಕ್ ಕುಮಾರ್, ಉಪಾಧ್ಯಕ್ಷ ಕೆಗ್ಗೆರೆ ಗಿರೀಶ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕೃಷ್ಣೇಗೌಡ, ಜಿಪಂ ಮಾಜಿ ಸದಸ್ಯ ಅಮಿತ್ ವಿ ದೇವರಹಟ್ಟಿ, ತಾಪಂ ಮಾಜಿ ಅಧ್ಯಕ್ಷ ಜಯರಾಮೇಗೌಡ, ಉಪನ್ಯಾಸಕ ಡಿ.ಶ್ರೀನಿವಾಸ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಕಾಂಗ್ರೆಸ್ ಮುಖಂಡ ಕೆ.ಎಸ್.ಸುಮಂತ್ ಸೇರಿದಂತೆ ಇನ್ನಿತರರು ಇದ್ದರು.

ಪೌತಿ ಖಾತಾ ಆಂದೋಲನದಲ್ಲಿ ರಾಜ್ಯದಲ್ಲಿ ಮಂಡ್ಯ ಜಿಲ್ಲೆ ಪ್ರಥಮ ಸ್ಥಾನ

ಕಂದಾಯ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳ ಕಾರ್ಯವೈಖರಿ ಬಗ್ಗೆ ಜಿಲ್ಲಾಧಿಕಾರಿಗಳಿಂದ ಶ್ಲಾಘನೆ

ಮಂಡ್ಯ: ಕಂದಾಯ ಇಲಾಖೆಯಲ್ಲಿನ ಇ- ಪೌತಿ ಖಾತಾ ಆಂದೋಲನದಲ್ಲಿ ಮಂಡ್ಯ ಜಿಲ್ಲೆಯು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದ್ದು ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಉತ್ತಮವಾಗಿ ಕಾರ್ಯ ನಿರ್ವಹಣೆ ಮಾಡಿರುವುದರಿಂದ ಆಗಿದ್ದು ಕಂದಾಯ ಇಲಾಖೆಯ ನೌಕರರ ಕಾರ್ಯಕ್ಷಮತೆ ಬಗ್ಗೆ ಜಿಲ್ಲಾಧಿಕಾರಿಗಳು ಶ್ಲಾಘನೆ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಕಂದಾಯ ಇಲಾಖೆಯ ಕುಂದು ಕೊರತೆಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇ ಪೌತಿ ಖಾತೆ, ಸಕಾಲ ಅರ್ಜಿಗಳು, ಬೆಳೆ ಸಮೀಕ್ಷೆ ಹಾಗೂ ಎಲ್ಲಾ ವಿಷಯಗಳಲ್ಲಿ ಗುರಿ ನಿಗದಿಪಡಿಸುತ್ತಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ತ್ವರಿತವಾಗಿ ಕೆಲಸ ಮಾಡಿಕೊಟ್ಟ ಹಾಗೇ ಆಗುತ್ತಿದೆ. ಈ ಸಂದರ್ಭದಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಪೌತಿ ಖಾತೆ ಆಂದೋಲನದ ಕೆಲಸವನ್ನು ಕಾನೂನು ಬದ್ಧವಾಗಿ ಸರ್ಕಾರ ನಿಗದಿಪಡಿಸಿರುವ ನಿಯಮಗಳ ಅನುಸಾರ ಮಾಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇರ ನೇಮಕಾತಿ ಸರ್ಕಾರದ ಮಟ್ಟದಲ್ಲಿ ಇದೆ. ಸರ್ಕಾರದಕ್ಕೆ ಈ ಸಂಬಂಧ ಪ್ರಸ್ತಾವನೆ ಕಳುಹಿಸಲಾಗಿದ್ದು ನೇಮಕಾತಿ ಶೀಘ್ರವೇ ನೇಮಕಾತಿ ಪ್ರಕ್ರಿಯೆ ಸರ್ಕಾರದಿಂದ ಆಗುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಂದಾಯ ಇಲಾಖೆಯ ನೌಕರರಿಗೆ ಕಾಲ ಮಿತಿ ವೇತನ ಬಡ್ತಿ ಪ್ರಕ್ರಿಯೆ ಪ್ರೊಬೇಷನರಿ ಘೋಷಣೆ ವಿಳಂಬ ಆಗದಂತೆ ತುರ್ತಾಗಿ ಮಾಡಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ತುರ್ತು ಸಂದರ್ಭದಲ್ಲಿ ಅಧಿಕಾರಿಗಳು ನೌಕರರಿಗೆ ಸಾಂದರ್ಭಿಕ ರಜೆ ಮಂಜೂರು ಮಾಡಬೇಕು. ವೇತನ ಪಾವತಿ ಪ್ರತಿ ತಿಂಗಳು ತಡ ಆಗದಂತೆ ಮಾಡಲು ಬಟವಾಡೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಕಂದಾಯ ಇಲಾಖೆಯಲ್ಲಿ ನೌಕರರ ಮೇಲೆ ಇಲಾಖಾ ವಿಚಾರಣೆಗಳನ್ನು ಬಾಕಿ ಇದ್ದು ನಿಗದಿತ ಅವಧಿಯೊಳಗೆ ತುರ್ತಾಗಿ ವಿಚಾರಣೆಯನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಅನುರೂಪ ಸತಿ ದುಗ್ಗಳೆ

| ವೀಣಾ ಹೇಮಂತ್‌ಗೌಡ ಪಾಟೀಲ್

ಉಪೇಕ್ಷಿತ ವಚನಕಾರರು

ಪಾಲಕರನ್ನು ಕಳೆದುಕೊಂಡ ಆ ವ್ಯಕ್ತಿ ಸುಮಾರು 12 ವರ್ಷಗಳ ಕಾಲ ಕನ್ಯಾನ್ವೇಷಣೆಯಲ್ಲಿ ತೊಡಗಿದ್ದ. ಆತನ ಸವಾಲನ್ನು ಸ್ವೀಕರಿಸುವ ಮತ್ತು ಗೆದ್ದು ತೋರಿಸುವ ಹೆಣ್ಣುಮಗಳನ್ನು ವಿವಾಹವಾಗುವ ಇಚ್ಛೆಯನ್ನು ಆತ ಹೊಂದಿದ್ದ. ಎಲ್ಲ ರೀತಿಯಲ್ಲೂ ಉತ್ತಮನಾಗಿದ್ದ ಆತನನ್ನು ಮದುವೆಯಾಗಲು ಹಲವು ಹೆಣ್ಣು ಮಕ್ಕಳು ಇಚ್ಛಿಸಿದರೂ ಕೂಡ ಆತನ ಸವಾಲನ್ನು ಕೇಳಿ ಹಿಂಜರಿಯುತ್ತಿದ್ದರು. ಮರಳು ಮಿಶ್ರಿತ ಅಕ್ಕಿ ಹಾಗೂ ಕಬ್ಬನ್ನು ಉಪಯೋಗಿಸಿ ಅಡುಗೆಯನ್ನು ಮಾಡಬೇಕು, ಯಾವುದೇ ಕಾರಣಕ್ಕೂ ನೀರನ್ನು ಬಳಸಬಾರದು ಎಂಬುದು ಆತನ ಸವಾಲಾಗಿತ್ತು.

ಹೀಗೆಯೇ ಕನ್ಯಾರ್ಥಿಯಾಗಿ ಆತ ಇಂದಿನ ಕಲ್ಬುರ್ಗಿ ಜಿಲ್ಲೆಯ ಅಫ್ಜಲಪುರ ತಾಲೂಕಿನ ಗೊಬ್ಬೂರು ಗ್ರಾಮಕ್ಕೆ ಬಂದ. ಆ ಗ್ರಾಮದ ಪರಮ ಕಾಯಕನಿಷ್ಠ ದಂಪತಿಗಳಾದ ಮಲ್ಲಿನಾಥ ಹಾಗೂ ಮಹಾದೇವಿಯರ ಮಗಳು ಬಾಲ್ಯದಿಂದಲೇ ಉತ್ತಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು ಬೆಳೆದ ಹೆಣ್ಣು ಮಗಳು.

ಕನ್ಯಾರ್ಥಿಯಾಗಿ ಬಂದ ವ್ಯಕ್ತಿಯ ಸವಾಲನ್ನು ಕೇಳಿದ ಆಕೆ ಇಷ್ಟೇ ತಾನೇ! ಎಂದು ಹೇಳಿದಳಲ್ಲದೇ ಆತ ಕೊಟ್ಟ ಮರಳುಮಿಶ್ರಿತ ಅಕ್ಕಿ ಹಾಗೂ ಕಬ್ಬುಗಳನ್ನು ಪಡೆದುಕೊಂಡಳು. ಕಬ್ಬಿನಿಂದ ರಸವನ್ನು ತೆಗೆದು ಅದರಲ್ಲಿ ಮರಳು ಮಿಶ್ರಿತ ಅಕ್ಕಿಯನ್ನು ಹಾಕಿ ಕುದಿಸಿದಳಾಕೆ. ಗಟ್ಟಿಯಾದ ಮರಳು ತಳವನ್ನು ಸೇರಿದರೆ ಕಬ್ಬಿನ ರಸದ ಸಾರದಲ್ಲಿ ಕುದಿದ ಅಕ್ಕಿ ಗಡಿಗೆಯ ಮೇಲ್ಭಾಗದಲ್ಲಿ ಸಂಗ್ರಹವಾಯಿತು. ನಿಧಾನವಾಗಿ ಅದನ್ನು ಸೌಟಿನಿಂದ ಸಂಗ್ರಹಿಸಿ ಆಕೆ ತಟ್ಟೆಗೆ ಹಾಕಿ ಆ ವ್ಯಕ್ತಿಯ ಕೈಗೆ ಕೊಟ್ಟಳು. ಸಂಪ್ರೀತನಾದ ಆ ವ್ಯಕ್ತಿ ಆಕೆಯನ್ನು ವಿವಾಹವಾಗಲು ಒಪ್ಪಿಗೆ ಸೂಚಿಸಿದನು. ಹೀಗೆ ಆಕೆಯನ್ನು ಪರೀಕ್ಷಿಸಿದ ವ್ಯಕ್ತಿಯೇ ಆದ್ಯ ವಚನಕಾರ ಎಂದೇ ಹೆಸರಾದ ದೇವರ/ ಜೇಡರ ದಾಸಿಮಯ್ಯ ಹಾಗೂ ಆತನ ಸವಾಲನ್ನು ಸಮರ್ಥವಾಗಿ ನಿಭಾಯಿಸಿದ ವ್ಯಕ್ತಿ ಆತನ ಪತ್ನಿಯೇ ಅನುರೂಪ ಸತಿ ಎಂದು ಹೆಸರಾದ ದುಗ್ಗಳೆ.

"ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ " ಎಂಬ ಪತಿಯ ಮಾತಿನಂತೆ ಅವರಿಬ್ಬರ ದಾಂಪತ್ಯ ಸಾಗಿತ್ತು. ಮೂಲತಃ ನೇಕಾರಿಕೆಯ ಕಾಯಕವನ್ನು ಹೊಂದಿದ್ದ ದಾಸಿಮಯ್ಯನವರಿಗೆ ಮನೆಯ ಎಲ್ಲಾ ಕೆಲಸಗಳನ್ನು ಪೂರೈಸಿ ನಂತರ ನೇಯ್ಗೆಯ ಕೆಲಸದಲ್ಲಿ

ದುಗ್ಗಳೆ ಪತಿಗೆ ಜೊತೆಯಾಗುತ್ತಿದ್ದಳು. ಪತಿಗೆ ಸಹಚರಳಾಗಿ ಅವನೊಂದಿಗೆ ಏಕಭಾವವಾಗಿ ನಿಂತ ದುಗ್ಗಳೆ ಪತಿಯ ಕಾಯಕ ನಿಷ್ಠೆಗೆ, ದಾಸೋಹಕ್ಕೆ ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದಳು.

ಮತಿಯಲ್ಲಿ ಗುಣದಲ್ಲಿ ಪತಿಭಕ್ತಿಯಲ್ಲಿ
ಪತಿ ಪೂಜೆಯಲ್ಲಿ ಅತಿ ಜಾಣೆಯೆನಿಸಿದ
ಸತಿ ದುಗ್ಗಳವ್ವೆಗೆ ಶರಣಾಗು

ಎಂಬ ತ್ರಿಪದಿಯು ದುಗ್ಗಳೆಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ.

12ನೇ ಶತಮಾನದಲ್ಲಿ ಶರಣ ಸಂಕುಲವು ಪರ್ಯಾಯ ಬದುಕನ್ನು ಕಟ್ಟಿಕೊಡುವಾಗ, ಶರಣರಿಗೆ ಹಾಗೂ ವಚನಕಾರರಿಗೆ "ದಾಂಪತ್ಯದ ಮೂಲಕ ಪ್ರಕೃತಿ ಸಹಜವಾದ ಕರಣಂಗಳ ಸುಖವನ್ನು ಸಾತ್ವಿಕವಾಗಿ ಅನುಭವಿಸುವುದೇ ನಿಜವಾದ ಬದುಕು" ಎಂದು ತೋರಿದವರು ದುಗ್ಗಳೆ ಹಾಗೂ ದೇವರ ದಾಸಿಮಯ್ಯನವರು. 'ದಾಂಪತ್ಯ ತ್ಯಾಜ್ಯವಲ್ಲ ಹಾಗೂ ಸನ್ಯಾಸ ಶ್ರೇಷ್ಠವಲ್ಲ' ಎಂಬುದು ಅವರ ಪ್ರತಿಪಾದನೆಯಾಗಿತ್ತು. ಇವರಿಗೆ ಸುವರ್ಚಲೆ ಎಂಬ ಮಗಳು ಹುಟ್ಟಿದಳು.

ಅವರಿಬ್ಬರ ದಾಂಪತ್ಯದ ಅನ್ಯೋನ್ಯತೆಯನ್ನು ಕಂಡು ಎಲ್ಲರೂ ಬೆರಗಾಗುತ್ತಿದ್ದರು. ಒಂದೊಮ್ಮೆ ಅತ್ಯಂತ ಬೆಲೆ ಬಾಳುವ ರೇಷ್ಮೆಯ ನೂಲಿನಿಂದ ಸುಂದರವಾದ ದಿವ್ಯಾಂಬರವನ್ನು ದೇವರ ದಾಸಿಮಯ್ಯ ಮತ್ತು ದುಗ್ಗಳೆ ದಂಪತಿಗಳು ನೇಯ್ದರು. ಹೀಗೆ ತಯಾರಿಸಿದ ದಿವ್ಯಾಂಬರವನ್ನು ದಾಸಿಮಯ್ಯನವರು ಮಾರುವ ಉದ್ದೇಶದಿಂದ ಮಾರುಕಟ್ಟೆಗೆ ಕೊಂಡೊಯ್ದರು.... ಆದರೆ ಆ ರೇಷ್ಮೆಯ ನೂಲಿನ ನುಣುಪನ್ನು, ಅತ್ಯಂತ ಅದ್ಭುತವಾದ ನೇಯ್ಗೆಯ ಕೌಶಲವನ್ನು ಕಂಡ ಗ್ರಾಹಕರು ಅದನ್ನು ಖರೀದಿಸುವ ತಾಕತ್ತು ತಮಗಿಲ್ಲ ಎಂದು ಹಿಂಜರಿದರು. ಅನಿವಾರ್ಯವಾಗಿ ಅದನ್ನು ಮನೆಗೆ ತಂದ ದಾಸಿಮಯ್ಯನವರನ್ನು ಪರೀಕ್ಷಿಸಲು ಸಾಕ್ಷಾತ್ ಪರಶಿವನೇ ವೃದ್ಧ ಭಿಕ್ಷುಕನ ವೇಷಧಾರಿಯಾಗಿ ಬಂದು ದಾನವಾಗಿ ಆ ಬಟ್ಟೆಯನ್ನು ಕೇಳಿದನು. ಒಂದು ಕ್ಷಣ ಕೂಡ ಯೋಚಿಸದೆ ಅದನ್ನು ದಾನವಾಗಿ ನೀಡಿದ ಪತಿಗೆ ಒಂದು ಮಾತು ಕೂಡ ನಿಷ್ಠುರವಾಗಿ ನುಡಿಯದಂತಹ ಸತಿ ಶಿರೋಮಣಿ ದುಗ್ಗಳೆ.

ಹಾಗೆ ಕೊಟ್ಟ ವಸ್ತ್ರವನ್ನು ಆ ಭಿಕ್ಷುಕ ಹರಿದು ಚೂರು ಚೂರು ಮಾಡಿ ತನ್ನ ತಲೆಗೆ ಹಾಗೂ ಸೊಂಟಕ್ಕೆ ಸುತ್ತಿಕೊಂಡಾಗ ಕೊಂಚವೂ ಬೇಸರ ಪಟ್ಟುಕೊಳ್ಳದೆ ಹೋದ ಆ ದಂಪತಿಗಳ ನಿಲುವನ್ನು ಕಂಡು ಬೆರಗಾದವರು ಬಹಳ.

ದುಗ್ಗಳೆಯನ್ನು ಅನುರೂಪ ಸತಿ ಎಂದು ಹೇಳಲು ಮತ್ತೊಂದು ಕಾರಣವಿದೆ... ಅದೊಂದು ದಿನ ಅವರ ಮನೆಗೆ ದಾಸೋಹಕ್ಕೆ ಆಗಮಿಸಿದ ಶರಣರು ದೇವರ ದಾಸಿಮಯ್ಯನವರನ್ನು ಕುರಿತು ಸಂಸಾರಿ ಮತ್ತು ಸನ್ಯಾಸಿಗಳಲ್ಲಿ ಯಾವ ವ್ಯಕ್ತಿ ಸುಖಿಯಾಗಿರುತ್ತಾನೆ ? ಎಂದು ಕೇಳಿದರು.

ಇದಕ್ಕೆ ಉತ್ತರವಾಗಿ ದೇವರ ದಾಸಿಮಯ್ಯನವರು , ನಡು ಹಗಲಿನಲ್ಲಿ ಮನೆಯ ಹೊರಗೆ ಕಳೆದು ಹೋದ ಸೂಜಿಯನ್ನು ಹುಡುಕಲು ದೀಪವನ್ನು ಹಚ್ಚಿಕೊಂಡು ಬರಲು ಪತ್ನಿಗೆ ಸೂಚಿಸಿದರು ಪತಿಯ ಆಜ್ಞೆಯನ್ನು ಶಿರಸಾವಹಿಸಿ ದುಗ್ಗಳೆ ಪಾಲಿಸಿದಳು. ಮನೆಯ ಕೋಣೆಯ ಮೂಲೆ ಮೂಲೆಯನ್ನು ದೀಪದ ಬೆಳಕಿನಲ್ಲಿ ದಾಸಿಮಯ್ಯನವರು ಪರೀಕ್ಷಿಸಿದರು. ಇದನ್ನು ಕಂಡು ಆ ಶರಣರಿಗೆ ಮನೆಯ ಹೊರಗೆ ಕಳೆದುಹೋದ ಸೂಜಿಯನ್ನು ಮನೆಯಲ್ಲಿ ಹುಡುಕುತ್ತಿರುವ ದಾಸಿಮಯ್ಯನವರ ಪರಿಯನ್ನು ಹಾಗೂ ಅವರ ಮಾತಿಗೆ ಎದುರಾಡದೆ ಪತಿಗೆ ಸಹಾಯಕವಾಗಿ ನಡೆದುಕೊಳ್ಳುತ್ತಿರುವ ಪತ್ನಿಯನ್ನು ಕಂಡು ಅಚ್ಚರಿಗೊಂಡರು.

ಕೆಲ ಹೊತ್ತಿನ ನಂತರ ಈಗಾಗಲೇ ಆರಿ ತಣ್ಣಗಾಗಿರುವ ಅಂಬಲಿಯನ್ನು ಆರಿಸಲು ಬೀಸಣಿಕೆಯಿಂದ ಗಾಳಿಯನ್ನು ಬೀಸಲು ದೇವರ ದಾಸಿಮಯ್ಯನವರು ಪತ್ನಿಗೆ ಹೇಳಿದಾಗ ಆಕೆ ಅವರ ಮಾತಿನಂತೆಯೇ ನಡೆದುಕೊಂಡಳು..... ಇದನ್ನು ಕಂಡು ಶಿವಶರಣರು ದೇವರ ದಾಸಿಮಯ್ಯನವರಿಗೇನು ಮರುಳೇ ಎಂದು ಅಚ್ಚರಿಗೊಂಡಾಗ ಪತಿ ಹೇಳಿದ ಎಲ್ಲಾ ವಿಷಯಗಳನ್ನು ಮರು ಮಾತಿಲ್ಲದೆ ಒಪ್ಪಿಕೊಂಡು ಪಾಲಿಸುವ ಸಂಗಾತಿ ಇದ್ದರೆ ಸಂಸಾರ ಜೀವನ ಶ್ರೇಷ್ಠ, ಪ್ರತಿಯೊಂದು ಮಾತಿಗೂ ವಾದಕ್ಕಿಳಿಯುವ, ಜಗಳ ಮಾಡುವ ಸಂಗಾತಿ ಇದ್ದರೆ ಸನ್ಯಾಸಿಯಾಗುವುದು ಮೇಲು ಎಂದು

ಈಗ ತಿಳಿಯಿತಲ್ಲವೇ ಎಂದು ದೇವರ ದಾಸಿಮಯ್ಯನವರು ಈ ಘಟನೆಯಿಂದ ಸಾಬೀತುಪಡಿಸಿದರು.ನಿಜ ಎಂದು ಆ ಶರಣರು ತಲೆದೂಗಿದರು.

ಮತ್ತೊಂದು ಕಥೆಯ ಪ್ರಕಾರ ದೇವರ ದಾಸಿಮಯ್ಯನವರು ಪ್ರತಿದಿನ ಆಹಾರವನ್ನು ಸೇವಿಸುವಾಗ ಒಂದು ಬಟ್ಟಲಿನಲ್ಲಿ ತುಸು ನೀರು ಹಾಗೂ ಒಂದು ಸೂಜಿಯನ್ನು ಇಡಲು ಹೇಳಿದ್ದರು. ಪ್ರತಿ ದಿನವೂ ಇದನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬಂದ ದುಗ್ಗಳೆ ಪತಿಗೆ ಈ ಕುರಿತು ಯಾವತ್ತೂ ಹೀಗೇಕೆ ಎಂದು ಕೇಳಿರಲಿಲ್ಲ. ಪತಿ ಹೇಳುವ ಪ್ರತಿಯೊಂದು ವಿಷಯದಲ್ಲಿಯೂ ಅರ್ಥವಿದೆ ಎಂದೇ ಆಕೆ ಭಾವಿಸುತ್ತಿದ್ದಳು.

ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಸತಿಪತಿಗಳೊಂದಾಗದವರ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ ಕಾಣಾ ರಾಮನಾಥ

ಎಂದು ಅನನ್ಯ ದಾಂಪತ್ಯದ ಕುರಿತು ವಚನವನ್ನು ರಚಿಸಿರುವ ದಾಸಿಮಯ್ಯನವರು ಪತ್ನಿ ದುಗ್ಗಳೆಯ ವಿನಮ್ರತೆಯ ಕುರಿತು ಹೀಗೆ ಬರೆದಿದ್ದಾರೆ.

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ

ಎಂದು ಆಕೆಯ ಮಿತವ್ಯಯ, ಪತಿಭಕ್ತಿ, ಬಳಗದವರೊಂದಿಗಿನ ಉತ್ತಮ ಒಡನಾಟ, ಸೌಮ್ಯ ಮತ್ತು ಸಾತ್ವಿಕ ನಡೆ-ನುಡಿಯ ಕುರಿತು ದೇವರ ದಾಸಿಮಯ್ಯನವರು ಹೇಳಿದ್ದಾರೆ.

ಪತಿ ದಾಸಿಮಯ್ಯನವರಂತೆ ದುಗ್ಗಳೆ ಕೂಡ ವಚನ ರಚನೆ ಮಾಡಿದ್ದು ಆಕೆಯ ಅಂಕಿತನಾಮ ದಾಸಯ್ಯ ಪ್ರಿಯ ರಾಮನಾಥ. ಆಕೆಯ ಒಟ್ಟು ಎರಡು ವಚನಗಳು ಲಭ್ಯವಾಗಿದ್ದು ಆಕೆಯ ವಚನಗಳ ಒಟ್ಟು ಸಾರ ಹೀಗಿದೆ... ತತ್ವಕ್ಕೂ ಬದುಕಿಗೂ ದೂರದ ಸಂಬಂಧ ಇರುವುದರಿಂದ ತತ್ವಕ್ಕಿಂತ ಸತ್ಯಶ್ರೇಷ್ಠವಾದದ್ದು ಜೀವನ ಪ್ರೀತಿಯ ಬದುಕು ಎಂದು ಆಕೆ ಪ್ರತಿಪಾದಿಸುತ್ತಾಳೆ.

ಇಂದ್ರಿಯ ನಿಗ್ರಹ ಸಲ್ಲದು ಹಾಗೆ ಮಾಡಿದ್ದೇ ಆದರೆ ದೋಷಗಳು ಬಂದು ಕಾಡುತ್ತವೆ. ಪಂಚೇಂದ್ರಿಯಗಳ ನಿಗ್ರಹದಿಂದ ಸಾಧಕನ ಸಾಧನೆಗೆ ಅಡ್ಡಿ ಆತಂಕಗಳು ಎದುರಾಗುತ್ತವೆ ಅದಕ್ಕಾಗಿ ಕುಟುಂಬ ಜೀವನಕ್ಕೆ ಶರಣರು ಒತ್ತು ಕೊಡುತ್ತಾರೆ ಎಂದು ಆಕೆ ತನ್ನ ವಚನದಲ್ಲಿ ಪ್ರತಿಪಾದಿಸಿದ್ದಾಳೆ.

ಹೀಗೆ ದುಗ್ಗಳೆ ಹಾಗೂ ದಾಸಿಮಯ್ಯ ದಂಪತಿಗಳು ಬದುಕಿನ ಬಗ್ಗೆ ಅಸಾಧಾರಣ ತಿಳುವಳಿಕೆ ಹೊಂದಿದ ಸಮಾನ ಮನಸ್ಕರಾಗಿ, ಶಿವ ತತ್ವ ಚಿಂತಕರಾಗಿ ಸಂಸಾರದ ಬಂಡಿ ಎಳೆಯುವಲ್ಲಿ ಭುಜಕ್ಕೆ ಭುಜ ಕೊಟ್ಟು ಬಾಳುತ್ತಾ ತಮ್ಮ ಕುಲ ಕಸುಬನ್ನು ಕಾಯಕವೆಂದು ಸ್ವೀಕರಿಸಿ ಅದರಲ್ಲಿ ದೈವತ್ವವನ್ನು ಕಂಡರು.

ದುಗ್ಗಳೆಯೂ ಸಮ ಚಿತ್ತ, ಸಮಭಾವದಿಂದ ಬದುಕನ್ನು ನಡೆಸಿ ಗುರು,ಲಿಂಗ,ಜಂಗಮ ಭಕ್ತಿಯಲ್ಲಿ ಬದುಕನ್ನು ಸಾಗಿಸಿ ಕಾಯಕದಲ್ಲಿಯೇ ಆತ್ಮ ಸಾಕ್ಷಾತ್ಕಾರದ ಪವಿತ್ರ ಕಾರ್ಯವನ್ನು ನಡೆಸಿ ಅನುರೂಪ ಸತಿಯಾಗಿ ಶರಣರಲ್ಲಿ ಅದ್ವಿತೀಯ ಎನಿಸಿದಳು.

ಅನುರೂಪ ಸತಿ ದುಗ್ಗಳೆ ನಮಗೆಲ್ಲರಿಗೂ ಮಾದರಿಯಾಗಲಿ ಎಂದು ಆಶಿಸುವ.

ಹಿರಿಯರು ಹೇಳುವ ಹಿತನುಡಿಯಂತೆ
ಮುತ್ತು ಒಡೆದರೆ ಹೋಯಿತು,
ಮಾತು ಆಡಿದರೆ ಹೋಯಿತು
ಕಳೆದ ಸಮಯ ಬರದೇ ಹೋಯಿತು ಆದರೆ
ಅದರ ಹಿಂದೆ ಬಿದ್ದ ಮನಸ್ಸಿಗೆ ತುಂಬಾ ನೋವು ಹೆಚ್ಚಾಯ್ತು ಎಂಬುದು ತಾರುಣ್ಯವಸ್ಥೆಯಲ್ಲಿರುವ ನಮ್ಮ ವಿದ್ಯಾರ್ಥಿಗಳನ್ನು ಕಂಡಾಗ ಅವರನ್ನು ಎಚ್ಚರಿಸುವ ಪ್ರಯತ್ನ

ಮುದ್ದು ವಿದ್ಯಾರ್ಥಿಗಳಿಗೊಂದು ಪುಟ್ಟ ಕಿವಿಮಾತು

ಮಾಡುವುದು ಒಳಿತು ಎನ್ನುವ ಭಾವ ಹೊತ್ತಿರುವ ನನ್ನ ಈ ಜೀವ ಕೆಲವೊಂದು ಸಲಹೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅದೇನೆಂದರೆ ನಮ್ಮೆದುರಿಗೆ ಇರುವ ಈ ಮೌಲ್ಯಭರಿತ ಕ್ಷಣವನ್ನು ಎಂದಿಗೂ ಅನವಶ್ಯಕವಾಗಿ ಹಾಳು ಮಾಡದೇ ಸಮಯವನ್ನು ಸದುಪಯೋಗ ಪಡೆಸಿಕೊಳ್ಳುವ ಕೆಲಸ ನಿಮ್ಮಿಂದ ಆಗಬೇಕಿದೆ ಮುದ್ದು ಮಕ್ಕಳೇ. ಹತ್ತನೇ ತರಗತಿ ಹಾಗೂ ದ್ವಿತೀಯ ಪಿ.ಯು.ಸಿ.ಯ ವಿದ್ಯಾರ್ಥಿಗಳೇ ಈಗಾಗಲೇ ಪೂರ್ವ ಸಿದ್ಧತಾ ಪರೀಕ್ಷೆ ಆರಂಭವಾಗಿವೆ. ನಿಮ್ಮ ಕಲಿಕೆಯ ಕೊನೆಯ ಘಟ್ಟವೆಂದರೆ ಅದುವೇ ಈ ಪರೀಕ್ಷಾ ಸಮಯ.ಅದನ್ನು ನೆನೆದು ಅದರಲ್ಲಿ ನಿಮ್ಮ ಗುರಿ ಮುಟ್ಟುವ ಕಾರ್ಯಕ್ಕೆ ತಾವುಗಳು ಅಣಿಯಾಗಬೇಕಿದೆ.ಆದರೆ ಅದರ ಮಧ್ಯ ಆಗಾಗ ಅಲ್ಲಲ್ಲಿ ಬರುತ್ತಿರುವ ಜಾತ್ರಾ ಮಹೋತ್ಸವ, ಟಿವಿಯಲ್ಲಿ ನೇರ ಪ್ರಸಾರವಾಗುವ ಕ್ರೀಡೆಗಳು ಹಾಗೂ ಅನೇಕ ಸಭೆ ಸಮಾರಂಭಗಳು ಬಹು ವಿಜೃಂಭಣೆಯಲ್ಲಿ ನಿಮ್ಮ ಎದುರಿಗೆ ರಾರಾಜಿಸುವುದರಿಂದ ನಿಮ್ಮ ಮನಸ್ಸು ಅದರತ್ತ ಕೊಂಚ ವಿಚಲನೆ ಹೊಂದುವ ಪ್ರಭಾವ ಹೆಚ್ಚಿದ್ದರು ನಿಮ್ಮ ಜೇಬಲ್ಲಿ ಒಂದು ವಿಷಯದ ಬಗ್ಗೆ ಬರೆದಿರಲಿ "ಇಂದಿನ ಸುಖ ಮುಂದಿನ ದುಃಖಕ್ಕೆ ಕಾರಣ.... ವಿಚಲಿತವಾಗದಿರು ಓ ನನ್ನ ಮನವೇ " ಎಂದಿರಲಿ ಆಗಾಗ ಅದು ಬಡಿದೇಬ್ಬಿಸಬಹುದು ಅಂತಹ ವಿಷಯಕ್ಕೆಲ್ಲ ಮನಸ್ಸು ವಿಚಲಿತ ಆಗದಂತೆ ದೇಹಕ್ಕೂ ಹಾಗೂ ಮನಸ್ಸಿಗೂ ಒಳ್ಳೆ ವಾತಾವರಣ ಕಲ್ಪಿಸಿಕೊಂಡು ಮನೆಯಲ್ಲೇ ನಿಗದಿತ ವೇಳಾಪಟ್ಟಿ ಅನುಸರಿಸಿಕೊಂಡು ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು ಒಳಿತು. ಅದಕ್ಕೆಂದೇ ನಿಮ್ಮಲ್ಲಿ ನಿಮ್ಮ ಶಿಕ್ಷಕರೆಲ್ಲರೂ ಒಗ್ಗಟ್ಟಾಗಿ ಸಿಗುವ ಸಮಯಕ್ಕೆ ಒಂದು ಚೌಕಟ್ಟು ನಿರ್ಮಿಸಿಕೊಂಡು ಅದನ್ನು ಅಚ್ಚುಕಟ್ಟಾಗಿ ವಿಭಾಗ ಮಾಡಿ ವಿಷಯಗಳನ್ನು ನಿಮಗೆ ಹೊರೆಯಾಗದಂತೆ ಹೊಂದಾಣಿಕೆ ಮಾಡಿ ಬೋಧನೆ ಮಾಡುತ್ತಿರುವುದು ಈ ಲೇಖನ ಓದುವಾಗ ಅರಿವಾಗ ಬಹುದು,ನಿಮ್ಮ ಗುರಿ ಮುಟ್ಟುವಲ್ಲಿ ಅದಾಗಲೇ ಮುಕ್ಕಾಲು ಭಾಗ ಚಲಿಸಿ ಆಗಿದೆ. ಇನ್ನೇನಿದ್ದರೂ ನಿಮ್ಮ ಕಾಲು ಭಾಗವನ್ನು ಅವರ ಮಾರ್ಗದರ್ಶನದಡಿಯಲ್ಲಿ ಸಾಗಿ ನಿಮ್ಮ ವಿಜಯ ಪತಾಕೆ ಹಾರಿಸುವ ಕಾರ್ಯ ಒಂದೇ ಬಾಕಿ. ಅದನ್ನು ತಾವೆಲ್ಲರೂ ಶ್ರದ್ದೆಯಿಂದ ಸಂಪೂರ್ಣ ಮಾಡಬೇಕಿದೆ.ಈ ಮಧ್ಯ ಆಗಾಗ ಅನೇಕ ಅಡೆತಡೆ ಬರಬಹುದು ಅದನ್ನೆಲ್ಲ ಮೆಟ್ಟಿ ನಿಲ್ಲುತ್ತ ಕಠಿಣ ಪರಿಶ್ರಮವನ್ನು ಮಾಡಿ ಯಶಸ್ಸು ಕಾಣುವ ಕಾರ್ಯ ಕೇವಲ ನಿಮ್ಮಿಂದ ಮಾತ್ರ ಸಾಧ್ಯ. ಅದಕ್ಕೆಂದೇ ನೀವು ಮಾಡಬೇಕಾದ ವ್ಯವಸ್ಥಿತ ಕಾರ್ಯ ಈ ಕೆಳಗಿನಂತೆ ಇದೆ.

1. ಇರುವ ಒಂದು ತಿಂಗಳು ಮುಂಜಾನೆ 5:30 ಕ್ಕೂ ಮುಂಚೆ ಎದ್ದು ದಿನಚರಿ ಮುಗಿಸಿ ಬರವಣಿಗೆಯ ವಿಷಯ ಆರಂಭ ಮಾಡಿದರೆ ಅದು ನಿದ್ರಾದೇವಿಯನ್ನು ದೂರವಿಡಲು ಸಹಕಾರಿ ಆಗುತ್ತದೆ.
2. ನಿಮ್ಮದೇ ಆದ ಒಂದು ವೇಳಾಪಟ್ಟಿ ತಯಾರಿಸಿಕೊಂಡು ನಿಮ್ಮ ಮನೆಯ ನಿಮ್ಮ ರೂಮ್ ಅಥವಾ ಬಾಗಿಲಿನ ಹಿಂಭಾಗದಲ್ಲಿ ಅಂಟಿಸಿ ಅದನ್ನು ಆಗಾಗ ನೋಡುವುದರಿಂದ ಓದುವ ಹುಮ್ಮಸ್ಸು ದ್ವಿಗುಣಗೊಳ್ಳುವುದು.
3. ಆಗಾಗ ಕುದಿಸಿ ಆರಿಸಿದ ನೀರನ್ನು ಕುಡಿಯುತ್ತ ಆರೋಗ್ಯದ ಕಡೆಗೂ ಗಮನ ಹರಿಸುವುದು ಒಳಿತು.
4. ಅನಗತ್ಯ ತಿರುಗಾಟವನ್ನು ಮಾಡದೇ ಮನೆಯಲ್ಲೇ ಕುಳಿತು ಅಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಿ.
5. ನಿತ್ಯ ಶಿಕ್ಷಕರೊಂದಿಗೆ ಸಂಪರ್ಕದಲ್ಲಿದ್ದು ಕಲಿಕೆಯ ನಿರಂತರತೆ ಕಾಪಾಡುತ್ತಾ ನಿಮ್ಮನ್ನು ನೀವು ಸಿದ್ದಗೊಳಿಸಿಕೊಳ್ಳುವುದು ಬಹುಮುಖ್ಯವಾಗಿದೆ.
6. ಕ್ಲಿಷ್ಟವೆನಿಸುವ ವಿಷಯಗಳಾದ ಗಣಿತ, ವಿಜ್ಞಾನ ವಿಷಯದಲ್ಲಿ ಶಿಕ್ಷಕರ ಮಾರ್ಗದರ್ಶನದಂತೆ ಬಹುಮುಖ್ಯ ಅಂಶಗಳನ್ನು ಮನೆಯಲ್ಲಿ ದಿನಕ್ಕೆ ಕನಿಷ್ಠ 2-3ಗಂಟೆಯಂತೆ ನಿರಂತರ ಓದಿ ಬರೆಯುವ ರೂಢಿ ಮಾಡುವುದು.
7. ಇನ್ನು ನಿಮಗೆ ವಾರಾಂತ್ಯದಲ್ಲಿ ಸಿಗುವ ಪ್ರತಿ ಶನಿವಾರ ಹಾಗೂ ರವಿವಾರ ಮನೆಯಲ್ಲಿ ಪಾಲಕರ ಸಹಕಾರದೊಂದಿಗೆ ಮದ್ಯಾಹ್ನದ ಬಿಡುವಿನ ವೇಳೆ 3ಗಂಟೆ ಹೊಂದಾಣಿಕೆ ಮಾಡಿಕೊಂಡು ಒಂದು ಮಾದರಿ ಪ್ರಶ್ನೆ ಪತ್ರಿಕೆಯನ್ನು ಸಂಪೂರ್ಣ ಬಿಡಿಸಲು ಸಮಯವನ್ನು ನಿಗದಿ ಪಡಿಸಿಕೊಳ್ಳುವುದು ಒಳಿತು.

ಪಾಸಾಗುತ್ತೇನೆಂಬ ನಂಬಿಕೆ ಒಂದೇ ಇದ್ದರೆ ಸಾಲದು ಅದಕ್ಕೆ ತಕ್ಕುದಾದ ನಿರಂತರ ಕಲಿಕೆಯೂ ಅತ್ಯಗತ್ಯ ಅದನ್ನು ಮುಂದುವರೆಸಿ ಗೆಲುವು ನಿಮ್ಮದಾಗಲಿ ಎನ್ನುತ್ತಾ ಶುಭ ಹಾರೈಸುವೆ. ಶುಭವಾಗಲಿ

ಆನಂದ ಜಿ.ಎನ್.
ದಾಂಡೇಲಿ.(ಉ.ಕ.)

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,